# ಹಂಪಿ ಟೈಮ್ಸ್

## HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಸಂಪುಟ:01 • ಸಂಚಿಕೆ:221 • ನೋಂದಣಿ ನಂ.:KARKAN27911 • ವಿಜಯನಗರ • 27.01.2024 • ಶನಿವಾರ • ಪುಟ:04 • ಬೆಲೆ:2
Volume:01 • Issue:221 • Reg.No:KARKAN27911 • VIJAYANAGARA • 27.01.2024 • Saturday • Page:04 • Rs:2



ಹಂಪಿ ಟೈಮ್ಸ್ HAMPI TIMES Kannada Daily

BOOK SPACE
as your requirement

Special Offer Just For You!
Special Discount
And Free Creative
Support
SPECIAL OFFER



www.hampitimes.com
epaper.hampitimes.com
CALL US : 9448633038
Email us Your Advertisement Content to : hampitimes@gmail.com



A.N.ENTERPRISES
ANE
Contact For Supply & Service
E-mail: aneenterprises121@gmail.com
#10th Ward, GT Compound, Behind Meeralam Talkies,
Hosapete - 583201. Vijayanagara Dist.

OUR SERVICES
- All types of Fabrication & Erection, Pipelines, Project Works
- Industrial Packing Service
- Foundry Fitting Works
- Industrial and Packing Material Supplier
- All Types of Wood Works and Supplier



M: 99801 36034 /98807 01217 / 80501 18450


# ಫೆಬ್ರವರಿಯಲ್ಲಿ ಆರನೇ ಗ್ಯಾರಂಟಿ ವಸತಿ ಜಾರಿ ಸಂವಿಧಾನ ನಮ್ಮೆಲ್ಲರ ಸೌಭಾಗ್ಯ: ಸಚಿವ ಜಮೀರ್

**ಹಂಪಿ ಟೈಮ್ಸ್ ಹೊಸಪೇಟೆ**

ವಿಜನಗರ ಜಿಲ್ಲೆ ನೂತನವಾಗಿ ರಚನೆಯಾಗಿದ್ದರಿಂದ ಅನೇಕ ಸಮಸ್ಯೆಗಳಿಗೂ ಪರಿಹಾರ ಕಂಡುಕೊಳ್ಳಬೇಕಿದೆ. ಸಿಎಂ ಸಿದ್ದರಾಮಯ್ಯನವರ ನೇತೃತ್ವದಲ್ಲಿ ಕೆಡಿಪಿ ಸಭೆ ಆಯೋಜಿಸಿ ಬಹುಕಾಲದ ಸಮಸ್ಯೆ ಹಾಗೂ ಬೇಡಿಕೆಗಳಿಗೆ ಪರಿಹಾರ ಕಂಡುಕೊಳ್ಳಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹ್ಮದ್ ಖಾನ್ ಹೇಳಿದರು.

ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಶುಕ್ರವಾರ 75ನೇ ಗಣರಾಜ್ಯೋತ್ಸವದ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು. ಎಲ್ಲರ ಸಹಕಾರದೊಂದಿಗೆ ವಿಜಯನಗರ ಜಿಲ್ಲೆಯನ್ನು ವಿಶೇಷವಾಗಿ ಅಭಿವೃದ್ಧಿಗೊಳಿಸಬೇಕೆಂಬ ಕನಸು ಕಂಡಿದ್ದೇನೆ. ಸರ್ಕಾರ ಜಾರಿಗೊಳಿಸಿದ ಐದು ಗ್ಯಾರಂಟಿಗಳು ಈಗಾಗಲೇ ಜನರ ಮೆಚ್ಚುಗೆ ಪಡೆದಿವೆ. ಆರನೇ ಗ್ಯಾರಂಟಿಯಾಗಿ ಫೆ. ಕೊನೆವಾರದಲ್ಲಿ ವಸತಿ ಸೌಕರ್ಯ ಕಲ್ಪಿಸಲಾಗುವುದು.

ಪ್ರಪಂಚದಲ್ಲೇ ಅತ್ಯಂತ ದೊಡ್ಡ ಪ್ರಜಾ ಪ್ರಭುತ್ವ ವ್ಯವಸ್ಥೆಯನ್ನು ಹೊಂದಿರುವ ಭಾರತ ದೇಶ ಪ್ರಜಾತಂತ್ರ ಗಣತಂತ್ರ ಪ್ರಯೋಗವನ್ನು ಯಶ್ವಸಿಯಾಗಿ ನಡೆಸಿಕೊಂಡು ಬಂದಿದೆ. ಇದಕ್ಕಾಗಿ ಭಾರತದ ಸಂವಿಧಾನ ಶಿಲ್ಪಿ ಮಹಾನ್ ಮಾನವತವಾದಿ ಭಾರತರತ್ನ ಡಾ.ಬಿ.ಆರ್. ಅಂಬೇಡ್ಕರ್ ಅವರನ್ನು ಪ್ರತಿಯೊಬ್ಬರೂ ಸ್ಮರಿಸಲೇಬೇಕು.

ಸಂವಿಧಾನದ ಮೂಲ ಆಶಯ ಸಾಮಾಜಿಕ ನ್ಯಾಯ. ನಾವೆಲ್ಲರೂ ಸಂವಿಧಾನದ ಆಶಯ ಈಡೇರಿಸಲು ಪ್ರಾಮಾಣಿಕವಾಗಿ ನಡೆಯುವ ಮೂಲಕ ಅಂಬೇಡ್ಕರ್ ಅವರ ಕನಸು ನನಸು ಮಾಡಬೇಕಾಗಿದೆ.





ಫೆಬ್ರವರಿ 02, 03 ಹಾಗೂ 04 ರಂದು ಹಂಪಿ ಉತ್ಸವವನ್ನು 4 ವೇದಿಕೆಗಳಲ್ಲಿ ವಿಜೃಂಭಣೆಯಿಂದ ಆಚರಿಸಲಾಗುತ್ತಿದ್ದು, ಸ್ಥಳೀಯ ಕಲಾವಿದರು, ಹೊರ ಜಿಲ್ಲೆಯ ಕಲಾವಿದರು, ಚಿತ್ರರಂಗದ ಪ್ರಮುಖರೆಲ್ಲರೂ ಭಾಗವಹಿಸಲಿದ್ದು, ಸದರಿ ಕಾರ್ಯಕ್ರಮಕ್ಕೆ ವಿಜಯನಗರ ಜಿಲ್ಲೆಯ ಎಲ್ಲಾ ನಾಗರಿಕರೆಲ್ಲರೂ ಆಗಮಿಸಿ ಸದರಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಕೋರಿದರು.

10 ಪಥ ಸಂಚಲನ ಪಡೆಗಳ ವೀಕ್ಷಣೆ ಮತ್ತು ವಂದನೆ ಸ್ವೀಕರಿಸಿದರು.

ಕೆಎಸ್‌ಪಿಎಲ್ ಪ್ರೌಢಶಾಲೆಯ ಮಕ್ಕಳು ಮತ್ತು ನಿವೇದಿತಾ ಪ್ರೌಢಶಾಲೆಯ ಮಕ್ಕಳು ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸಿ ನೃತ್ಯ ಪ್ರದರ್ಶಿಸಿದರು.

ಇದೇ ಸಂದರ್ಭದಲ್ಲಿ ಅನ್ನಭಾಗ್ಯ, ಗೃಹಜ್ಯೋತಿ ಫಲಾನುಭವಿಗಳಿ ಪ್ರಮಾಣ ಪತ್ರ, ಅಂಗವಿಕಲ ಕಲ್ಯಾಣ ಇಲಾಖೆಯಿಂದ ಅಂಧ ವಿದ್ಯಾರ್ಥಿಗಳಿಗೆ ಬ್ರೈಲ್ ಲ್ಯಾಪ್‌ಟಾಪ್ ಮತ್ತು 20 ನಾಲ್ಕು ಗಾಲಿಯ ಮೋಟಾರುವಾಹನ ವಿತರಿಸಲಾಯಿತು. ಆರೋಗ್ಯ ಇಲಾಖೆಯ ಪಿಎಂಜೆಎವೈ ಅನುಷ್ಠಾನದಲ್ಲಿ ಉತ್ತಮ ಐದು ಪಿಎಚ್‌ಸಿಗಳಿಗೆ ಸಚಿವರು ಪ್ರಮಾಣ ಪತ್ರಗಳನ್ನು ವಿತರಿಸಿದರು. ಪದ್ಮಶ್ರೀ ಪುರಸ್ಕೃತರಾದ ಮಾತಾ ಮಂಜಮ್ಮ ಜೋಗತಿ ಅವರನ್ನು ಇದೆ ವೇಳೆ ಸನ್ಮಾನಿಸಲಾಯಿತು. ವಿಜಯನಗರ ಕ್ಷೇತ್ರದ ಸ್ಥಳೀಯ ಶಾಸಕ ಎಚ್.ಆರ್.ಗವಿಯಪ್ಪ ಉಪಸ್ಥಿತರಿದ್ದರು. ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ, ಎಸ್ಪಿ ಶ್ರೀಹರಿಬಾಬು ಬಿ.ಎಲ್., ಜಿಪಂ ಸಿಇಒ ಸದಾಶಿವಪ್ರಭು, ಸೇರಿದಂತೆ ಇತರರು ಇದ್ದರು.

ಚಿತ್ರಗಳು: ಕೆ.ಎಂ.ಕೊಟ್ರೇಶ













75ನೇ ಗಣರಾಜ್ಯೋತ್ಸವ ಝಲಕ್

















**ಮೈಕ್ರೋ ನ್ಯೂಸ್**

## ಹುಲಗಿ ರೈಲ್ವೇ ಮೇಲ್ಸೇತುವೆ ಕಾಮಗಾರಿಗೆ ಶೀಘ್ರ ಭೂಮಿ ಪೂಜೆ

**ಹಂಪಿ ಟೈಮ್ಸ್ ಕೊಪ್ಪಳ**

ಕೊಪ್ಪಳ ಜಿಲ್ಲೆಯ ಸುಪ್ರಸಿದ್ದ ಧಾರ್ಮಿಕ ಕ್ಷೇತ್ರವಾದ ಹುಲಗಿಯ ರೇಲ್ವೇ ಮೇಲ್ಸೇತುವೆ ಕಾಮಗಾರಿ ಪ್ರಾರಂಭಕ್ಕಾಗಿ ಕೊಪ್ಪಳ ಸಂಸದರಾದ ಕರಡಿ ಸಂಗಣ್ಣ ಅವರು ಶೀಘ್ರದಲ್ಲಿ ಭೂಮಿ ಪೂಜೆ ನೆರವೇರಿಸಲಿದ್ದಾರೆ ಎಂದು ಕೊಪ್ಪಳ ಲೋಕಸಭಾ ಸದಸ್ಯರ ಆಪ್ತ ಸಹಾಯಕರು ತಿಳಿಸಿದ್ದಾರೆ.

ಕೊಪ್ಪಳ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಹುಲಗಿ ರೈಲ್ವೇ ಎಲ್.ಸಿ ಗೇಟ್ ನಂಬರ್ 79ರಲ್ಲಿ ಮೇಲ್ಸೇತುವೆ ಕಾಮಗಾರಿಗೆ ರೂ. 25 ಕೋಟಿಗಳ ಮೊತ್ತದಲ್ಲಿ ಕರೆಯಲಾಗಿದ್ದ ಟೆಂಡರ್ ಪ್ರಕ್ರಿಯೆಯಲ್ಲಿ ಮುಕ್ತಾಯಗೊಂಡು, ಕಾಮಗಾರಿಗೆ ಆದೇಶವನ್ನು ನೀಡಲಾಗಿದೆ. ಈ ಕಾಮಗಾರಿಯನ್ನು ಅತೀ ಶೀಘ್ರದಲ್ಲಿ ಪ್ರಾರಂಭಿಸಲು ಸಂಸದರಿಂದ ಭೂಮಿ ಪೂಜಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಇಲಾಖೆಗೆ ಕೋರಿದ್ದು, ಕಾಮಗಾರಿಯು ಶೀಘ್ರದಲ್ಲೇ ಪ್ರಾರಂಭಗೊಳ್ಳಲಿದೆ.

'ಸುಕ್ಷೇತ್ರ ಹುಲಿಗೆಮ್ಮ ದೇವಸ್ಥಾನಕ್ಕೆ ವಿಶೇಷ ಸಂಧರ್ಭಗಳಲ್ಲಿ ಲಕ್ಷಾಂತರ ಭಕ್ತರು ಹಾಗೂ ನಿತ್ಯವೂ ಹತ್ತಾರು ಸಾವಿರ ಭಕ್ತರು ದೇವಿಯ ದರ್ಶನಕ್ಕೆಂದು ಆಗಮಿಸುತ್ತಿರುತ್ತಾರೆ. ಹೀಗಾಗಿ ಈ ಭಾಗದಲ್ಲಿ ಇರುವ ರೈಲ್ವೇ ಗೇಟ್‌ಗೆ ಮೇಲ್ಸೇತುವೆ ನಿರ್ಮಾಣಕ್ಕಾಗಿ ಬಹಳ ವರ್ಷಗಳಿಂದ ಬೇಡಿಕೆ ಇತ್ತು. ಸಧ್ಯ ಕೇಂದ್ರ ಸರ್ಕಾರ ರೂ. 25 ಕೋಟಿಗಳ ಅನುದಾನದ ಮೇಲ್ಸೇತುವೆ ಕಾಮಗಾರಿಗೆ ಅನುಮೋದನೆಯನ್ನು ನೀಡಿದ್ದು, ಶೀಘ್ರದಲ್ಲೇ ಭೂಮಿ ಪೂಜೆಯನ್ನು ನೆರವೇರಿಸಿ, ಕಾಮಗಾರಿ ಪ್ರಾರಂಭಿಸಲಾಗುವುದು' ಎಂದು ಸಂಸದ ಕರಡಿ ಸಂಗಣ್ಣ ತಿಳಿಸಿದ್ದಾರೆ.


Digital
PHOTOGRAPHY SERVICE
" CAPTURE YOUR PERFECT MOMENT "
WEDDING SHOOTING
FASHION SHOOTING
EVENT COVERAGE
BOOK NOW
9632121359



COLD PRESSED OILS
HEALTH Benefits



- Heart Healthy
- Diabetes Friendly
- Healthy Skin & More
- Hair Fall Control

Nandi Enterprises
C/o HAMPI TIMES
Valmiki Circle, HOSAPETE
9482599089


# ಸಿರಿವಂತಿಕೆಯ ನಡುವೆ ಹೃದಯವಂತಿಕೆ ಮರೆಯಾಗಿದೆ

### ಕನ್ನಡ ವಿವಿ ಕುಲಪತಿ ಡಾ. ಡಿ.ವಿ. ಪರಮಶಿವಮೂರ್ತಿ ಹೇಳಿಕೆ | ಅಮೂಲ್ಯವಾದ ಮತದಾನದ ಹಕ್ಕು ಬಳಸಿ ಸದೃಢ ಭಾರತ ನಿರ್ಮಿಸಿ

**ಹಂಪಿ ಟೈಮ್ಸ್ ಹೊಸಪೇಟೆ**

ಕನ್ನಡ ವಿಶ್ವವಿದ್ಯಾಲಯದ ಕ್ರಿಯಾಶಕ್ತಿ ಆವರಣದಲ್ಲಿ ಶುಕ್ರವಾರ 75ನೇ ಗಣರಾಜ್ಯೋತ್ಸವದ ಧ್ವಜಾರೋಹಣ ನೇರವೇರಿಸುವ ಮೂಲಕ ಸಂಭ್ರಮದಿಂದ ಆಚರಿಸಲಾಯಿತು.

ಕನ್ನಡ ವಿವಿ ಕುಲಪತಿ ಡಾ. ಡಿ.ವಿ. ಪರಮಶಿವಮೂರ್ತಿ ಅಧ್ಯಕ್ಷತೆವಹಿಸಿ ಮಾತನಾಡಿದರು. ಗಣರಾಜ್ಯೋತ್ಸವ ಮತ್ತು ಮತದಾರರ ದಿನ ಎರಡಕ್ಕೂ ಅಂತರ ಸಂಬಂಧವಿದೆ. ಇಂದು ನಾವು ವಿದ್ಯಾವಂತರಾಗುತ್ತಿದ್ದೇವೆ, ಸಿರಿವಂತರಾಗುತ್ತಿದ್ದೇವೆ. ಆದರೆ ಹೃದಯವಂತಿಕೆಯನ್ನು ಮರೆಯುತ್ತಿದ್ದೇವೆ. ಇನ್ನು ಮುಂದಾದರೂ ನಾವು ಇತರರಿಗೆ, ನಮ್ಮ ನೆರೆಹೊರೆಯವರಿಗೆ, ನಮ್ಮ ದೇಶಕ್ಕೆ



ಒಳಿತು ಮಾಡುವ ಮೂಲಕ ಸದೃಢ ಭಾರತವನ್ನು ಕಟ್ಟೋಣ. ನಮಗೆ ನೀಡಿರುವ ಅತಿ ಅಮೂಲ್ಯವಾದ ಹಕ್ಕು ಮತದಾನ. ಈ ಮತದಾನದ ಹಕ್ಕನ್ನು ಸಮರ್ಥವಾಗಿ ಬಳಸೋಣ ಎಂದು ಹೇಳಿದರು.

ಕನ್ನಡ ವಿಶ್ವವಿದ್ಯಾಲಯದ ಅಧ್ಯಯನಾಂಗದ ನಿರ್ದೇಶಕರಾದ ಡಾ. ಅಮರೇಶ್ ಯತಗಲ್ ಅವರು ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಮಾತನಾಡುತ್ತ, ಇಡೀ ಜಗತ್ತಿನಲ್ಲಿಯೇ ಸಮಾನತೆಯ ಮೇರು ಪರ್ವತ, ಸ್ವಾತಂತ್ರ್ಯದ ಮೇರು ಪರ್ವತ ನಮ್ಮ ಸಂವಿಧಾನ. ಭಾರತದ ರಾಷ್ಟ್ರಪತಿ ಹಾಕುವ ಮತದ ಮೌಲ್ಯ ಎಷ್ಟಿದಿಯೇ, ಒಬ್ಬ ಸಾಮಾನ್ಯ ಚುನಾವಣೆಯಲ್ಲಿ ಹಾಕುವ ಮತದ ಮೌಲ್ಯವು ಅಷ್ಟೇಯಿದೆ. >>2

## ವಚನ ಅರಿವು

### ಭವವಿಲ್ಲ

**ಲೋಕದ ಚೇಷ್ಟೆಗೆ ರವಿ ಬೀಜವಾದಂತೆ,**
**ಕರಣಂಗಳ ಚೇಷ್ಟೆಗೆ ಮನವೇ ಬೀಜ.**
**ಎನಗುಳ್ಳುದೊಂದು ಮನ.**
**ಆ ಮನ ನಿಮ್ಮಲ್ಲಿ ಸಿಲುಕಿದ ಬಳಿಕ**
**ಎನಗೆ ಭವವುಂಟೆ ಚೆನ್ನಮಲ್ಲಿಕಾರ್ಜುನಾ?**
**– ಅಕ್ಕಮಹಾದೇವಿ**

ಬೆಳಗಾಯಿತು ಎಂದರೆ ಸಾಕು ಜೀವನದ ಜಂಜಾಟಗಳು ಶುರುವಾಗುತ್ತವೆ. ಸೂರ್ಯ ಹುಟ್ಟಿದರೆ ಸಾಕು, ಮುಳುಗಿದಾಗಲೂ ಈ ಲೋಕದ ವ್ಯಾಪಾರಗಳು ಪ್ರಾರಂಭವಾಗುತ್ತವೆ. ಮನುಷ್ಯನಿಗೆ ಇಂದ್ರಿಯಗಳು ಕಾಡಲು ಮನಸ್ಸೇ ಕಾರಣ. ಇದಕ್ಕೆ ದೇಹವು ಸಹಕಾರಿಯಾಗಿರುತ್ತದೆ. ಕಾಮ, ಬಯಕೆ, ಆಸೆ, ಆಮಿಷಗಳು ಮನಸ್ಸಿನಲ್ಲಿ ನೆಲೆಯೂರಿ ಅರಿವನ್ನು ಕಳೆದು ಬಿಡುತ್ತವೆ. ಮಾನವನಿಗೆ ಮನಸ್ಸು ಒಂದೆ ಇರುತ್ತದೆ. ಅದನ್ನು ಭಕ್ತಿ, ಆನುಭಾವ, ಅರಿವನ್ನು ಪಡೆಯಲಿಕ್ಕೆ ಬಳಕೆ ಮಾಡಬೇಕು. ಆಗ ಭವ ಕಳೆದು ಆನುಭಾವದ ಸುಖ ದೊರೆಯುತ್ತದೆ.

ಅಕ್ಕ ಈ ವಚನದಲ್ಲಿ ತನಗೆ ಇರುವುದೊಂದೆ ಮನಸ್ಸು ಅದು ಶಿವನಿಗೆ ಮೀಸಲಾಗಿದೆ ಹಾಗಾಗಿ ನನಗೆ ಭವವಿಲ್ಲ ಎನ್ನುತ್ತಾಳೆ. ಭವವೆಂದರೆ ಈ ಲೋಕದ ಜಂಜಡಗಳಿಗೆ ಸಿಲುಕಿರುವುದು. ದೇಹ, ಮನಸ್ಸನ್ನು ಹಿಡಿತದಲ್ಲಿಟ್ಟುಕೊಂಡು ಬದುಕುವ ಪ್ರಯತ್ನ ಮಾಡಿದರೆ ಭವದಿಂದ ಆನುಭಾವದ ಸ್ಥಿತಿಗೆ ತಲುಪಬಹುದು.

**(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)**

## ಸಿರಿವಂತಿಕೆಯ ನಡುವೆ ಹೃದಯವಂತಿಕೆ ಮರೆಯಾಗಿದೆ

ಮೊದಲ ಪುಟದಿಂದ

ಭಾರತ ಒಂದು ಬಹುಮಹಡಿ ಕಟ್ಟಡ. ಅದರ ಮೆಟ್ಟಿಲುಗಳೇ ನಮ್ಮ ಸಂವಿಧಾನ. ಇದು ಆಡಳಿತದ ನೀತಿ ನಿಯಮಗಳನ್ನು ಪ್ರತಿನಿಧಿಸುತ್ತದೆ. ನಮ್ಮ ಸಂವಿಧಾನ ಇಡೀ ಬದುಕಿನಲ್ಲಿ ಬೆರೆತುಕೊಂಡಿದೆ. ಭಾರತದಲ್ಲಿ ಬಹುಸಂಸ್ಕೃತಿಯ ಜನರಿದ್ದಾರೆ. ಈ ಎಲ್ಲ ಜನರಿಗೆ ಅನ್ವಯವಾಗುವ ಸಂವಿಧಾನವನ್ನು ಡಾ.ಬಾಬ ಸಾಹೇಬ ಅಂಬೇಡ್ಕರ್ ಅವರ ತಂಡ ರೂಪಿಸಿಕೊಟ್ಟಿದೆ. ಇಡೀ ಜಗತ್ತಿನ ಎಲ್ಲ ಸಂವಿಧಾನಗಳನ್ನು ಅಧ್ಯಯನ ಮಾಡಿ ಅಲ್ಲಿನ ಉತ್ತಮ ಅಂಶಗಳನ್ನು ಅಳವಡಿಸಿಕೊಳ್ಳಲಾಗಿದೆ ಎಂದರು.

ವಿಶ್ವವಿದ್ಯಾಲಯದ ಉಪ ಕುಲಸಚಿವರಾದ ಡಾ.ಎ. ವೆಂಕಟೇಶ ಅವರು ಮಾತನಾಡುತ್ತ, ಗಣರಾಜ್ಯದ ಪರಿಕಲ್ಪನೆ ಅತ್ಯಂತ ರೋಚಕವಾದುದು ಮತ್ತು ಮಹತ್ವವಾದದು. ನಮ್ಮ ಸಂವಿಧಾನದಲ್ಲಿ ಸ್ವಾತಂತ್ರ್ಯ, ಸಮಾನತೆ, ಜಾತ್ಯತೀತ, ಭ್ರಾತೃತ್ವ, ಪ್ರಜಾಸತ್ತಾತ್ಮಕ, ಏಕತೆಯ ಪರಿಕಲ್ಪನೆಯನ್ನು ಅಳವಡಿಸಿಕೊಳ್ಳುವ ಮೂಲಕ ಜಗತ್ತಿಗೆ ಮಾದರಿಯಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ವಿವಿಧ ನಿಕಾಯಗಳ ಡೀನರು, ಮುಖ್ಯಸ್ಥರು, ಪ್ರಾಧ್ಯಾಪಕರು, ಬೋಧಕೇತರ ಸಿಬ್ಬಂದಿಗಳು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಸಹಾಯಕ ಕುಲಸಚಿವರಾದ ಗುರುಬಸಪ್ಪ ನಿರೂಪಿಸಿದರು.

**ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ.**
**ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.**
**ಡಿ..ವಿ.ಜಿ.**

### ಮಕ್ಕಳು ಅರಸರಾಗಬೇಕೆ?

**ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?**

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 9448633038

**ಕಂಠಪಾಠ ಮಾಡಿದರೂ ಮರೆತು ಹೋಗುತ್ತಾನೆ. ಆದರಿಂದ ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಗಳಿಸುತ್ತಿಲ್ಲ. ಓದಿದ್ದು ನೆನಪುಳಿಯುವಂತೆ ಮಾಡಲು ಏನು ಮಾಡಬೇಕು? ಎಂಬುದೇ ನನಗೆ ತಿಳಿಯುತ್ತಿಲ್ಲ. ಎನ್ನುವ ಮಾತು ಬಹುತೇಕ ಪಾಲಕರ ಮುಂದಿರುವ ಮಿಲಿಯನ್ ಡಾಲರ್ ಪ್ರಶ್ನೆಗಳಿಗೆ ಇಲ್ಲಿವೆ ಸರಳ ವಿಧಾನಗಳು**

# ಓದು... ನೆನಪು... ಸೂತ್ರಗಳು..



ಗೆಳೆಯ ಸಂತೋಷ ನನಗೆ ಸದಾ ಕೇಳುವ ಪ್ರಶ್ನೆ "ನನ್ನ ಮಗ ಯಾವಾಗ್ಲೂ ಓದುತ್ತಲೇ ಇರುತ್ತಾನೆ, ಆದರೆ ಅವನಿಗೆ ಸ್ವಲ್ಪ ಸಮಯಕ್ಕೆ ಅದು ನೆನಪಿರುವುದಿಲ್ಲ. ಅವನ ಜ್ಞಾಪಕ ಶಕ್ತಿ ಮತ್ತು ಏಕಾಗ್ರತೆ ಕಡಿಮೆಯಾಗಿದೆ. ತುಂಬಾ ಸಲ ಕಂಠಪಾಠ ಮಾಡಿದರೂ ಮರೆತು ಹೋಗುತ್ತಾನೆ. ಆದರಿಂದ ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಗಳಿಸುತ್ತಿಲ್ಲ. ಓದಿದ್ದು ನೆನಪುಳಿಯುವಂತೆ ಮಾಡಲು ಏನು ಮಾಡಬೇಕು? ಎಂಬುದೇ ನನಗೆ ತಿಳಿಯುತ್ತಿಲ್ಲ. ಅದಕ್ಕೆ ಜ್ಞಾಪಕ ಶಕ್ತಿ ಹೆಚ್ಚಿಸುವ ಮಾತ್ರೆಗಳ ಬಳಸಿದೆ, ಅದರಿಂದ ಏನು ಪ್ರಯೋಜನವಾಗಿಲ್ಲ" ಎನ್ನುವ ಮಾತು ಅವನಂತೆ ಬಹುತೇಕ ಪಾಲಕರ ಮುಂದಿರುವ ಮಿಲಿಯನ್ ಡಾಲರ್ ಪ್ರಶ್ನೆ.

### ಓದು–ಯಾಕೆ?

ಓದು ತನ್ನದೇ ಆದ ಮಹತ್ವವನ್ನು ಹೊಂದಿದೆ. ವೈಯಕ್ತಿಕ ಮತ್ತು ಬೌದ್ಧಿಕ ಬೆಳವಣಿಗೆಗೆ ಓದುವಿಕೆ ಮುಖ್ಯವಾಗಿದೆ. ಅಲ್ಲದೇ ದೃಷ್ಟಿಕೋನಗಳನ್ನು ವಿಸ್ತರಿಸುತ್ತಾ ವ್ಯಕ್ತಿತ್ವ ಬೆಳವಣಿಗೆಯಲ್ಲಿ ಅತ್ಯಂತ ಪ್ರಭಾವಶಾಲಿಯಾಗಿದೆ. ಜ್ಞಾನವನ್ನು ಹೆಚ್ಚಿಸುವುದರ ಜೊತೆಗೆ ಏಕಾಗ್ರತೆಯನ್ನು ಸುಧಾರಿಸುತ್ತದೆ. ವಿಮರ್ಶಾತ್ಮಕ ಚಿಂತನೆಯ ಕೌಶಲ್ಯಗಳನ್ನು ಹಾಗೂ ಕಲೆಗಳನ್ನು ಹೆಚ್ಚಿಸುವ ಮೂಲಕ ಅರಿವಿನ ವಿಸ್ತಾರಮಾಡುತ್ತದೆ. ಇದು ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂದರ್ಭಗಳಲ್ಲಿ ನಮ್ಮ ಸಂಬಂಧಗಳನ್ನು ಬೆಳೆಸಲು ನೆರವಾಗುತ್ತದೆ. ಈ ಎಲ್ಲ ಅಂಶಗಳ ಆಧಾರದಲ್ಲಿಯೇ ನಮ್ಮ ಶಿಕ್ಷಣ ಕ್ಷೇತ್ರದಲ್ಲಿ ಇದಕ್ಕೆ ಅತ್ಯಂತ ಪ್ರಧಾನ ಸ್ಥಾನವನ್ನು ನೀಡಲಾಗಿದೆ.

### ಓದು ಎಂದರೆ ?

ಒಂದು ಅಕ್ಷರವನ್ನು ಶಬ್ದದೊಂದಿಗೆ ಇರುವ ಸಂಬಂಧವನ್ನು ಊಹಿಸಿ ಅರ್ಥಮಾಡಿಕೊಳ್ಳುವುದು. ಬರಹವನ್ನು ಓದುವುದಷ್ಟೆ ಓದಲ್ಲ. ಅಲ್ಲಿರುವ ವಿಷಯವನ್ನು ಅರ್ಥಮಾಡಿಕೋಳ್ಳುವುದು ಓದಿನಲ್ಲಿ ಸೇರಿದೆ. ಹಾಗಾಗಿ ಇಲ್ಲಿ ಗುರುತಿಸುವಿಕೆಯ ಜೊತೆಗೆ ಗ್ರಹಿಕೆಯೂ ಪ್ರಧಾನ ಪಾತ್ರವಹಿಸುತ್ತದೆ. ಓದನ್ನು ಚಿಕ್ಕ ಪ್ರಾಯದ ಮಕ್ಕಳಿಗೆ ಕಲಿಸುವುದು ಸರಳ ಮತ್ತು ಸುಮಧುರ. ಮಕ್ಕಳು ಸುಲಭವಾಗಿ ಮಾಹಿತಿಗಳನ್ನು ಗ್ರಹಿಸಬಲ್ಲರು ಹಾಗೇ ಅದನ್ನು ನೆನಪಿನಲ್ಲಿಟ್ಟುಕೊಳ್ಳುತ್ತಾರೆ. ಚಿಕ್ಕ ವಯಸ್ಸಿನಲ್ಲಿ ಕಲಿವ ಆಸಕ್ತಿ ಅಧಿಕವಾಗಿರುತ್ತದೆ. ಬಾಲ್ಯದಲ್ಲೇ ಓದನ್ನು ಕಲಿತ ಮಕ್ಕಳು ಹೆಚ್ಚು ಹೆಚ್ಚು ಜ್ಞಾನವನ್ನು ಸಂಪಾದಿಸಬಲ್ಲರು. ಅಂದರೆ ಹೆಚ್ಚು ಓದುವ ಮಕ್ಕಳು ಉಳಿದ ಮಕ್ಕಳಿಗಿಂತ ವೇಗವಾಗಿ ಓದಬಲ್ಲರು ಮತ್ತು ಸುಲಭವಾಗಿ ಗ್ರಹಿಸಬಲ್ಲವರಾಗಿರುತ್ತಾರೆ ಎಂಬುದು ಎಲ್ಲರಿಗೂ ವೇದ್ಯವಾದ ಸಂಗತಿ.

ಪ್ರಸ್ತುತ ದಿನದಲ್ಲಿ ಓದಿಗೆ ಹಣಕ್ಕಿಂತ ಹೆಚ್ಚು ಬೆಲೆ ಬಂದಿದೆ. ಹಾಗಾಗಿ ಎಲ್ಲ ಪಾಲಕರೂ ತಮ್ಮ ಮಕ್ಕಳು ಓದಬೇಕು ಎಂದು ಅದರ ಹಿಂದೆ ಅತ್ಯಂತ ವೇಗವಾಗಿ ಓಡುತ್ತಿದ್ದಾರೆ. ಮಕ್ಕಳು ತಮ್ಮ ಶಕ್ತಿಮೀರಿ ಓದುತ್ತಿದ್ದಾರೆ. ಇಲ್ಲಿಂದಲೇ ಸಮಸ್ಯೆ ಪ್ರಾರಂಭವಾಗುತ್ತದೆ. ಓದಿದ್ದು ಅವರ ಜ್ಞಾಪಕದಲ್ಲಿ ಉಳಿಯುತ್ತಿಲ್ಲ. ಓದಿದ್ದು ನಮಗೆ ಅವಶ್ಯಕತೆ ಇದ್ದಾಗ, ನೆನಪಿಗೆ ಬಂದು ಕೈ ಹಿಡಿದು ಮುನ್ನೆಡೆಸದಿದ್ದರೆ, ಓದಿದ್ದು ವ್ಯರ್ಥವಾಗುತ್ತದೆ. ಇದಕ್ಕೆ ಮಕ್ಕಳು ಓದಿದ್ದು ಅವರ ಸ್ಮೃತಿ ಪಟಲದಲ್ಲಿ ಸದಾ ಇರುವಂತೆ ಮಾಡಲು ಕೆಲವು ಸರಳ ಸೂತ್ರಗಳಿವೆ. ಅವುಗಳಲ್ಲಿ ತಮಗೆ ಸರಿಯಾದುದನ್ನು ಆಯ್ಕೆ ಮಾಡಿಕೊಂಡು, ಮುನ್ನೆಡೆದರೆ ಗೆಲುವು ಸರಳವಾಗುತ್ತದೆ.

### ಓದಿನ ಸರಳ ಸೂತ್ರಗಳು:–

ಓದಿಗೆ ಸಮಯ ಅತ್ಯಗತ್ಯವಾಗಿದೆ. ಸಮಯ ಅತ್ಯಮೌಲ್ಯವಾಗಿದೆ. ಯಾರೂ ಅಗತ್ಯಕ್ಕಿಂತ ಹೆಚ್ಚಿನ ಸಮಯ ಅಧ್ಯಯನ ಮಾಡಲು ಸಿದ್ಧರಿರುವುದಿಲ್ಲ. ಇರುವ ಕಡಿಮೆ ಮತ್ತು ಸೀಮಿತ ಅವಧಿಯನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬೇಕಾಗುತ್ತದೆ. ಅದಕ್ಕಾಗಿ ಓದಿಗೆ ವೇಳಾಪಟ್ಟಿ ಸಿದ್ಧಪಡಿಸಿಕೊಳ್ಳಬೇಕು. ತಮಗಿರುವ ಪಾಠಗಳನ್ನು ಆಧರಿಸಿ ಎಷ್ಟು ದಿನ ಓದಬೇಕು?, ದಿನಕ್ಕೆ ಎಷ್ಟು ಓದಬೇಕು? ಎಂಬುದರ ಕುರಿತು ಸರಿಯಾದ ವೇಳಾಪಟ್ಟಿ ತಯಾರಿಸಿಕೊಳ್ಳಬೇಕು. ಕೆಲವರಂತೂ ಶಿಸ್ತಿಲ್ಲದೇ ತಮಗೆ ತಿಳಿದಾಗ, ಬಿಡುವು ಸಿಕ್ಕಾಗ ಓದುತ್ತಿರುತ್ತಾರೆ. ಇನ್ನೂ ಕೆಲವರು ಆರಂಭದಲ್ಲಿಯೇ ನಿರ್ಲಕ್ಷ ಮಾಡಿ, ಪರಿಕ್ಷಾ ಹಿಂದಿನ ದಿನ ರಾತ್ರಿ ಪೂರ್ತಿ ಓದುತ್ತಾರೆ. ಇದರಿಂದ ಓದಿದ್ದು ತಲೆಗೆ ಹತ್ತುತ್ತಿಲ್ಲ ಎಂದು ಪರದಾಡುತ್ತಾರೆ.

ಓದುವಾಗ ಮೊದಲು ಪಾಠದ ಶೀರ್ಷಿಕೆ, ಉಪ ಶಿರ್ಷಿಕೆ, ಚಿತ್ರ ಹಾಗೂ ಇತರೆ ಮಹತ್ವದ ಅಂಶಗಳನ್ನು ಪಟ್ಟಿಮಾಡಿಕೊಳ್ಳಬೇಕು. ಓದಲು ಪ್ರಾರಂಭಿಸಿದಾಗ ಮೊದಲು ಒಂದು ಪ್ಯಾರ ಓದಬೇಕು. ಆ ಪ್ಯಾರದಲ್ಲಿ ಓದಿದ್ದು ಪಠ್ಯ ಭಾಷೆಯಲ್ಲಿರುತ್ತದೆ. ಅದನ್ನು ನಿಮ್ಮದೇ ಸ್ವಂತ ಮಾತುಗಳಲ್ಲಿ ನಿಮ್ಮ ಮನಸ್ಸಿಗೆ ಹೇಳಿಕೊಳ್ಳಬೇಕು. ಪೂರ್ಣ ಪಾಠದ ನಂತರ ಅದನ್ನು ಪುನಃ ಮನನ ಮಾಡಿಕೊಳ್ಳಬೇಕು. ನಂತರ ಆ ಪಾಠವನ್ನು ಬೇರೆಯವರ ಮುಂದೆ ಹೇಳಬೇಕು. ಗೆಳೆಯರು, ಕುಟುಂಬದ ಸದಸ್ಯರು ಸೇರಿದಂತೆ ನಿಮ್ಮ ಆಪ್ತರ ಮುಂದೆ ಹೇಳಬೇಕು. ಅದನ್ನು ಅತ್ಯಂತ ಸರಳವಾಗಿ



**ಡಾ. ಪರಮೇಶ್ವರಯ್ಯ ಸೊಪ್ಪಿಮಠ**
**ಶಿಕ್ಷಕರು, ಹಗರಿಬೊಮ್ಮನಹಳ್ಳಿ**
**ಜಂಗಮ–9341444865**

ಅವರಿಗೆ ವಿವರಿಸುತ್ತಾ ಸ್ಪಷ್ಟಪಡಿಸಬೇಕು. ಆ ಮೂಲಕ ಓದಿದ್ದು ಮತ್ತು ಅದನ್ನು ಹೇಳಲು ಚೆನ್ನಾಗಿ ಅರ್ಥಮಾಡಿಕೊಂಡಿದ್ದು ಸೇರಿದಂತೆ ಅದು ವೇಗವಾಗಿ ಮನನವಾಗುವುದರ ಜೊತೆಗೆ ಹೆಚ್ಚು ಕಾಲ ಜ್ಞಾಪಕದಲ್ಲಿರುತ್ತದೆ.

ಕೆಲವರಿಗೆ ಬೇರೆಯವರು ಕೇಳಲು ಸಿಗದಿದ್ದಾಗ ಕನ್ನಡಿ ಮುಂದೆ ನಿಂತು ನಿಮಗೆ ನೀವೇ ಹೇಳಿಕೊಳ್ಳಬಹುದು. ಆ ಓದು ಕೊನೆಯವರೆಗೂ ನಿಮ್ಮ ಜೊತೆ ಇರಬೇಕು ಎನಿಸಿದರೆ, ಓದಿರುವುದನ್ನು ಇನ್ನೊಬ್ಬರಿಗೆ ಕಲಿಸುತ್ತಿರುವಂತೆ ಬರೆಯಬೇಕು. ನಿಮ್ಮದೇ ಮಾತಿನಲ್ಲಿ ವಿವರಿಸುತ್ತಾ ಬರೆಯಬೇಕು. ಎಲ್ಲಾ ಬರೆದ ಮೇಲೆ ಅದನ್ನು ಪರಿಶೀಲಿಸಬೇಕು. ತಪ್ಪಾಗಿರುವುದನ್ನು ಸರಿಪಡಿಸಿ, ಮತ್ತೆ ಬರೆದರೆ ಅದು ದೀರ್ಘಕಾಲ ನೆನಪಿನಲ್ಲಿ ಉಳಿಯುತ್ತದೆ.

ಓದಿರುವುದನ್ನು ಸರಳವಾದ ಪಾಯಿಂಟ್ಸ್ ರೂಪದಲ್ಲಿ ಬರೆದುಕೊಳ್ಳಬಹುದು. ಪಾಯಿಂಟ್ಸ್‌ಗಳ ಆಧಾರದಲ್ಲಿ ಒಂದು ಚಿತ್ರ ರಚಿಸಬಹುದು. ಆ ಚಿತ್ರ ಎಲ್ಲವನ್ನು ಹೇಳುತ್ತದೆ. ಇದಕ್ಕೂ ಮುಂದುವರೆದು ಓದಿದ್ದು ಹೆಚ್ಚು ಕಾಲ ನೆನಪಿಟ್ಟುಕೊಳ್ಳಬೇಕಾದರೆ ಮೈಂಡ್ ಮ್ಯಾಪ್ ಮಾಡಿಕೊಳ್ಳಬೇಕು. ಅದರಲ್ಲಿ ಹೆಚ್ಚಿನ ಸಂಖ್ಯೆಯ ಆಕೃತಿ, ಚಿತ್ರಗಳು, ಬಣ್ಣ, ಸಂಕೇತಗಳನ್ನು ಬಳಸಬೇಕು. ಅಂದರೆ ಪಾಯಿಂಟ್ಸ್ ಬರೆಯುವಾಗ ವಿಷಯ/ಶೀರ್ಷಿಕೆಯ ಚಿತ್ರವು ಪುಟದ ಮಧ್ಯದಲ್ಲಿರಲಿ. ನಂತರ ಅದಕ್ಕೆ ಪೂರಕವಾದ ಅತ್ಯಂತ ಮುಖ್ಯಪದಗಳನ್ನು ಸುತ್ತಲೂ ಬೇರೆ ಬೇರೆ ಬಣ್ಣಗಳಿಂದ ಬರೆಯಬೇಕು. ಅಲ್ಲಿ ವಿವರಣಾತ್ಮಕ ವಾಕ್ಯಗಳಿಗೆ ಅವಕಾಶವೇ ಇಲ್ಲ. ಅತ್ಯಂತ ಪ್ರಮುಖ ಪದಗಳನ್ನು ಗುರುತುಮಾಡುವುದು, ಬಾಣದಗೆರೆ ಎಳೆಯುವುದರ ಮೂಲಕ ಇಲ್ಲವೇ ಯಾವುದೇ ರೀತಿಯಲ್ಲಿ ಒತ್ತು ನೀಡಿ ತಕ್ಷಣ ಎದ್ದು ಕಾಣುವಂತಿರಬೇಕು. ಅದರ ಕುರಿತು ಹೊಸ ಆಲೋಚನೆಗಳು ಬಂದರೆ ಸಂಗ್ರಹಿಸಿ ಅವನ್ನೂ ಗುರುತು ಹಾಕಿಕೊಳ್ಳಬೇಕು. ನಂತರ ಆ ಚಿತ್ರ ನೋಡಿದ ತಕ್ಷಣ ಎಲ್ಲವೂ ನೆನಪಿಗೆ ಬರುತ್ತದೆ.

ಮಕ್ಕಳು ಪಠ್ಯದ ಪಾಠಗಳನ್ನೂ ಓದುತ್ತಾರೆ, ಅದೇ ರೀತಿ ಕಥೆ ಪುಸ್ತಕಗಳನ್ನೂ ಓದುತ್ತಾರೆ. ಅವುಗಳಲ್ಲಿ ಕಥೆಗಳೆ ಹೆಚ್ಚು ನೆನಪಿನಲ್ಲಿರುತ್ತವೆ. ಯಾಕೆ? ಅಂದರೆ, ಕಥೆಗಳನ್ನ ಮಕ್ಕಳು ಘಟನೆಗಳಾಗಿ ನೆನಪಿಟ್ಟುಕೊಳ್ಳುತ್ತಾರೆ. ಅಂದರೆ ಕಥೆಯಲ್ಲಿ ಬರುವ ಸ್ಥಳಗಳು ಅವರಿಗೆ ತಿಳಿದಿರುವ ಮತ್ತು ನೋಡಿರುವ ಸ್ಥಳಗಳಾಗಿ ಕಲ್ಪಿಸಿಕೊಳ್ಳುತ್ತಾರೆ. ಜೊತೆಗೆ ಪಾತ್ರಗಳು ಮಕ್ಕಳು ತಿಳಿದಿರುವ ವ್ಯಕ್ತಿಗಳೊಂದಿಗೆ ಹೋಲಿಸಿಕೊಳ್ಳುತ್ತಾರೆ. ಆದ್ದರಿಂದ ಮಕ್ಕಳು ಅನುಭವಿಸಿದ ಒಂದು ಘಟನೆಯಾಗಿ ಅದು ಅವರ ಮನಸ್ಸಲ್ಲಿರುತ್ತದೆ. ಅದೆ ರೀತಿ ಪಾಠವನ್ನೂ ಘಟನೆ ರೂಪಕ್ಕೆ ಪರಿವರ್ತಿಸಿದಲ್ಲಿ ಅದು ಬಹಳ ದಿನ ಉಳಿಯುತ್ತದೆ.

ಓದಿದ್ದು ಹೆಚ್ಚು ಕಾಲ ಉಳಿಯುವಂತಾಗಲು ಮನಸ್ಸು ಬಹಳ ಪ್ರಧಾನ ಪಾತ್ರ ವಹಿಸುತ್ತದೆ. ಸ್ವಲ್ಪ ಓದುತ್ತಲೇ ಅದು ಮತ್ತೆಲ್ಲೋ ಹರಿದಾಡಲಾರಂಭಿಸುತ್ತದೆ. ಅದನ್ನು ಹಿಡಿದಿಟ್ಟುಕೊಳ್ಳುವುದೇ ಸವಾಲಿನ ಕೆಲಸ. ಅದಕ್ಕೆ ಓದುವಾಗ ಪೆನ್ ಅಥವಾ ಪೆನ್ಸಿಲ್ ಹಿಡಿದುಕೊಂಡು, ಪ್ರತಿ ಸಾಲನ್ನೂ ಓದುವಾಗ ಪೆನ್‌ನ್ನು ಆ ಪದದ ಕೆಳಗೆ ಸರಿಸುತ್ತಾ ಮುಂದಕ್ಕೆ ಓದಬೇಕು. ಅಂಡರ್ ಲೈನ್ ಮಾಡುವುದು ಅಗತ್ಯವಿಲ್ಲ. ಪೆನ್ ಸರಿಸುತ್ತಾ ಓದಿದಂತೆ ಏನನ್ನು ಓದುತ್ತಿದ್ದೇವೆ ಎಂಬುದು ಮನನ ವಾಗುವುದರ ಜೊತೆಗೆ ಏಕಾಗ್ರತೆ ಬರುತ್ತದೆ. ಇದಕ್ಕೆ ಪೂರಕವಾಗಿ ಗಟ್ಟಿಯಾಗಿ ಓದುವುದೂ ಒಂದು ಚಟುವಟಿಕೆಯಾಗಿದೆ. ಗಮನ ಕೇಂದ್ರೀಕೃತವಾದಂತೆ ಮೌನ ಓದನ್ನು ಮಾಡಬಹುದಾಗಿದೆ. ಓದು ಪೂರ್ಣಗೊಂಡ ನಂತರ ಅದರ ಸಾರಾಂಶವನ್ನು ಬರೆಯಬೇಕು. ಅದರ ಮುಂದಿನ ಭಾಗ ಓದುವಾಗ ಮೊದಲಿಗೆ ಹಿಂದಿನದು ನೆನಪಿಸಿಕೊಳ್ಳಲು ಸಾರಾಂಶವನ್ನು ಓದಿ, ನಂತರ ಮುಂದಿನ ಭಾಗ ಓದಿದರೆ ಅನುಕೂಲವಾಗುತ್ತದೆ. ಕೊನೆಗೆ ಪಾಠದ ಸಂಪೂರ್ಣ ಸಾರಂಶವೂ ದೊರೆತಂತಾಗುತ್ತದೆ.

ಓದು ಸ್ಮರಣೆಯತ್ತ ಸಾಗಲು ಗೆಳೆಯರ ಜೊತೆ ಗುಂಪಿನಲ್ಲಿ ಓದುವುದು ಒಂದು ವಿಧಾನವಾಗಿದೆ. ಗೆಳೆಯರ ಜೊತೆ ಓದುತ್ತಾ ಅದರ ಕುರಿತಾಗ ಚರ್ಚೆ ಮಾಡುವುದು ಉತ್ತಮ. ಜೊತೆಗೆ ತಂತ್ರಜ್ಞಾನ ಎಲ್ಲರ ಕೈಗೂ ಸುಲಭವಾಗಿ ನಿಲುಕುತ್ತಿದೆ. ಮೊಬೈಲ್‌ನ್ನು ಗೇಮ್ ಸೇರಿದಂತೆ ಬೇರೆಯದಕ್ಕೆ ಬಳಸುವ ಬದಲು, ಕಲಿಕೆಗೆ ಪೂರಕವಾಗಿ ಬಳಸಬಹುದು. ಪಾಠಗಳ ವಿಡಿಯೋವನ್ನು ನೋಡುವುದು, ಆಡಿಯೋವನ್ನು ಕೇಳುವುದು ಒಂದು ಬಗೆಯಾದರೆ, ತಮ್ಮ ಪಾಠವನ್ನು ತಾವೇ ಆಡಿಯೋ ಮಾಡಿ, ತಮ್ಮದೇ ಅಡಿಯೋ ಬುಕ್ ಮಾಡಿಕೊಂಡು ಅದನ್ನು ಕೇಳಿದಂತೆಲ್ಲಾ ವಿಷಯವು ಮನಸ್ಸಿನಲ್ಲಿ ಹೆಚ್ಚು ಗಟ್ಟಿಯಾಗುತ್ತದೆ.

ಮಕ್ಕಳ ಓದು ಅವರ ವಿಕಸನದ ಮೇಲೂ ಪರಿಣಾಮ ಬೀರುವುದನ್ನು ಅಲ್ಲಗಳೆಯುವಂತಿಲ್ಲ. ಓದಿದ್ದು ಸರಿಯಾಗಿ ಜ್ಞಾಪಕಕ್ಕೆ ಬರದಿದ್ದರೆ ಅದು ಬದುಕಿನಮೇಲೆ ಅಡ್ಡ ಪರಿಣಾಮ ಉಂಟಾಗುತ್ತದೆ. ಅದಕ್ಕೆ ಮಕ್ಕಳ ಓದುವಿಕೆಯ ಕೆಲವು ಸರಳ ಸೂತ್ರಗಳನ್ನು ಮಾತ್ರ ಇಲ್ಲಿ ತಿಳಿಸಲಾಗಿದೆ. ಇದರ ಹೊರತಾಗಿ ಇನ್ನೂ ಅತ್ಯುತ್ತಮ ದಾರಿಗಳಿದ್ದರೆ ಅವುಗಳನ್ನೂ ಮಕ್ಕಳು ಅಳವಡಿಸಿಕೊಳ್ಳಬಹುದು.



# ದಕ್ಷಿಣ ಭಾರತದ ಮಹಾಕುಂಭಮೇಳ.... ಕೊಪ್ಪಳದ ಗವಿಮಠ ಜಾತ್ರೆ ನೋಡ ಬನ್ನಿ

ಜಾತ್ರೆಗಳು, ಉತ್ಸವಗಳು, ಸಮ್ಮೇಳನಗಳು ಮಾನವನ ಸಾಮಾಜಿಕ ಜೀವನದ ಅವಿಭಾಜ್ಯ ಅಂಗಗಳು. ಅದರಲ್ಲೂ ಉತ್ತರ ಕರ್ನಾಟಕದಲ್ಲಿ ಜಾತ್ರೆಗಳೆಂದರೆ ಮನೆ ಮನೆಗಳಲ್ಲೂ ಹಬ್ಬದ ಸಡಗರ. ಮನೆ ಮನೆಗಳಲ್ಲಿ ಬೀಗರು ಬಿಜ್ಜರು, ನೆಂಟರಿಷ್ಟರು ಸ್ನೇಹಿತರ ಸಮಾಗಮ. ಎತ್ತ ನೋಡಿದರತ್ತ ಜನಸಾಗರ, ನಾಲಿಗೆಗೆ ತರಾವರಿ ಅಡುಗೆಗಳ ಭೂರಿ ಭೋಜನ, ಕಣ್ಸೆಳೆಯುವ ಜಾತ್ರೆಯ ನೋಟ, ಮನ ತಣಿಸುವ ದೈವ ದರ್ಶನ, ಕಿವಿಗಡಚಿಕ್ಕುವ ತಮಟೆ, ಪೀಪೀ, ನಗಾರಿ ಮುಂತಾದ ವಾದ್ಯಗಳ ನಾದ, ಜನರ ಗದ್ದಲ, ಮಕ್ಕಳ ಕಲರವ, ಕೇಕೆ ಒಂದೆಡೆಯಾದರೆ.. ಸುಗಂಧ ಪುಷ್ಪಗಳ, ಊದಿನ ಕಡ್ಡಿಗಳ ಸಾಲು ಮಿರ್ಚಿ ಮಂಡಕ್ಕಿ ತರಹೇವಾರಿ ತಿಂಡಿಗಳ ಸುವಾಸನೆ ಬೀರುತ್ತಾ ಪಂಚೇಂದ್ರಿಯಗಳ ಸಕ್ರಿಯ ಕಾರ್ಯ ನಿರ್ವಹಣೆ. ಅಂತೂ ಜಾತ್ರೆಗಳು ನಮ್ಮೆಲ್ಲರ ಬಾಳಿನ ಅವಿಭಾಜ್ಯ ಅಂಗಗಳು. ಅಂತಹ ಅತ್ಯಂತ ಪ್ರಸಿದ್ಧ ಜಾತ್ರೆಗಳಲ್ಲಿ ಒಂದು ಕೊಪ್ಪಳದ ಶ್ರೀ ಗವಿಸಿದ್ದೇಶ್ವರ ಮಠದ ಜಾತ್ರೆ.... ದಕ್ಷಿಣ ಭಾರತದ ಮಹಾಕುಂಭಮೇಳವೆಂದೆ ಹೆಸರು ಪಡೆದಿರುವ ಜಾತ್ರೆ. ಪಂಚೇಂದ್ರಿಯಗಳಿಗೆ ರಸದೌತಣ, ಬುದ್ಧಿಜೀವಿಗಳಿಗೆ ವಿಚಾರ ವಿನಿಮಯ ಜ್ಞಾನ ಪ್ರಸರಣ, ಸರ್ವರಿಗೂ ಅರಿವಿನ ಜಾಗರಣ ಮೂಡಿಸುವ ಜಾಗ ಏಕೈಕ ಜಾತ್ರೆ ಕೊಪ್ಪಳದ ಗವಿಸಿದ್ದೇಶ್ವರ ಜಾತ್ರೆ. ಅನ್ನ, ಆಧ್ಯಾತ್ಮ ಮತ್ತು ಜ್ಞಾನಗಳನ್ನು ಏಕ ಕಾಲದಲ್ಲಿ ಉಣಪಡಿಸುವ ಜಾತ್ರೆ ಕೊಪ್ಪಳ ಗವಿಮಠದ ಜಾತ್ರೆ.



**ಹಿನ್ನೆಲೆ :-**

ಕೊಪ್ಪಳ ಗವಿಮಠದ ಜಾತ್ರೆಯನ್ನು ಕೊಪ್ಪಳದ ಗವಿಮಠದ 11ನೇ ಪೀಠಾಧಿಪತಿ ಶ್ರೀ ಗವಿಸಿದ್ದೇಶ್ವರ ಮಹಾಸ್ವಾಮಿಯವರ ಲಿಂಗೈಕ್ಯ ದಿನದಂದು ಆಚರಿಸಲಾಗುತ್ತದೆ. 800 ವರ್ಷಗಳ ಇತಿಹಾಸವಿರುವ ಕೊಪ್ಪಳ ಗವಿಮಠದ ಮೊದಲ ಪೀಠಾಧಿಪತಿಯಾದ ರುದ್ರಮುನಿ ಸ್ವಾಮಿಗಳು ಕರ್ನಾಟಕ ರಾಜ್ಯದಲ್ಲಿ ವೀರಶೈವ ಧರ್ಮವನ್ನು ಹೆಚ್ಚು ಪ್ರಚಲಿತಗೊಳಿಸಿದವರು. ಅವರು ಕಾಶಿಯ ಜಂಗಮವಾಡಿ ಮಠದಿಂದ 1080ರಲ್ಲಿ ಧರ್ಮ ಪ್ರಸಾರ ಮಾಡುತ್ತಾ ಕೊಪ್ಪಳ ನಗರದ ಪೂರ್ವ ದಿಕ್ಕಿನಲ್ಲಿರುವ ಗುಡ್ಡದ ಗವಿಯಲ್ಲಿ ನೆಲೆಸಿ ಧರ್ಮ ಪ್ರಸಾರ ಕಾರ್ಯ ನಡೆಸಿದರು. ಇವರು ನೆಲೆಸಿದ ಮಠವೇ ಗವಿಮಠ. ಇವರ ನಂತರ ಇವರ ಉತ್ತರಾಧಿಕಾರಿಗಳ ಪರಂಪರೆ ಆರಂಭವಾಯಿತು. ಮುಂದೆ ಇವರ ನಂತರ 11 ನೇ ಪೀಠಾಧಿಪತಿಯಾಗಿ ಬಂದ ಗವಿಸಿದ್ದೇಶ್ವರ ಸ್ವಾಮಿಗಳು ಹಲವಾರು ಪವಾಡಗಳನ್ನು ಮೆರೆದರು. ಧಾರ್ಮಿಕ ಸಾಮರಸ್ಯಕ್ಕೆ ನಾಂದಿ ಹಾಡಿದರು. ಸಾಮಾಜಿಕ ಸುಧಾರಣೆ ತಂದರು. ಮುಂದೆ ಅವರು ಪುಷ್ಯ ಮಾಸದ ಬಿದಿಗೆಯ ದಿನ ಅಂದರೆ ದವನದ ಹುಣ್ಣಿಮೆಯಾದ ಎರಡು ದಿನಕ್ಕೆ ಲಿಂಗೈಕ್ಯರಾದ ನಂತರ ಅವರ ಗುರುಗಳಿಗಾಗಿ ನಿರ್ಮಿಸಿದ ಸಮಾಧಿಯಲ್ಲಿಯೇ ಅವರ ಗದ್ದುಗೆಯನ್ನು ಮಾಡಿ ಪೂಜಾರಂಭ ಮಾಡಲಾಯಿತು. ಇದೀಗ 18ನೇ ಪೀಠಾಧಿಪತಿಯಾಗಿ ಅಭಿನವ ಗವಿಸಿದ್ದೇಶ್ವರ ಮಹಾಸ್ವಾಮಿಗಳು ಶ್ರೀಮಠದ ಭವ್ಯ ಪರಂಪರೆಯನ್ನು ಮುನ್ನಡೆಸಿ ಕೊಂಡು ಹೋಗುತ್ತಿದ್ದಾರೆ.



ಅಭಿನವ ಗವಿಸಿದ್ದೇಶ್ವರ ಮಹಾಸ್ವಾಮಿಗಳ ಕಾಲದಲ್ಲಿ ಮಠವು "ನ ಭೂತೊ ನ ಭವಿಷ್ಯತಿ" ಎಂಬಂತೆ ಅಭಿವೃದ್ಧಿ ಕಂಡಿದ್ದು ಅದಕ್ಕೆ ಕಾರಣ ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು ಎಂಬಂತಿರುವ ಅಭಿನವ ಗವಿಸಿದ್ದೇಶ್ವರ ಮಹಾಸ್ವಾಮಿಗಳು. ಸರಳತೆ, ಸಾತ್ವಿಕತೆಯೇ ಮೈವೆತ್ತ ಘನ ತತ್ವ ಮಹಿಮರಾದ ಗುರುಗಳು ತ್ರಿವಿಧ ದಾಸೋಹಿಗಳು. ಮಕ್ಕಳಲ್ಲಿ ಪ್ರೀತಿ, ಹಿರಿಯರಲ್ಲಿ ಮಮತೆ, ಸರೀಕರಲ್ಲಿ ವಿಶ್ವಾಸವನ್ನು ಹೊಂದಿರುವ ಉನ್ನತ ಬದುಕಿನ ಧ್ಯೇಯಗಳನ್ನು, ನಿಷ್ಠುರವಾದ ಸತ್ಯಗಳನ್ನು ಸರಳವಾಗಿ ಕರ್ನಾಟಕದ ಜನರಲ್ಲಿ ತಮ್ಮ ಪ್ರವಚನಗಳ ಮೂಲಕ ಬಿತ್ತುತ್ತಿರುವ ಶ್ರೀಗಳು ತಮ್ಮ ಜ್ಞಾನ, ವೈರಾಗ್ಯ ಮತ್ತು ಕರ್ತೃತ್ವ ಗುಣಗಳಿಂದ ಕರ್ನಾಟಕದ ಮನೆ ಮಾತಾಗಿದ್ದಾರೆ.

ಅವರ ಅಪಾರ ಕರ್ತೃತ್ವ ಶಕ್ತಿಯ ಫಲವೇ ಗವಿಮಠದ ಜಾತ್ರೆ. ಐದು ದಿನಗಳ ಕಾಲ ನಡೆಯುವ ಈ ಜಾತ್ರೆಯಲ್ಲಿ ಸುಮಾರು ತಿಂಗಳಪರ್ಯಂತ ಹಗಲಿರುಳೆನ್ನದೇ ಲಕ್ಷಾಂತರ ಜನರಿಗೆ ಅನ್ನದಾಸೋಹ ನಡೆಯುತ್ತದೆ. ನಾಡಿನ ಮೂಲೆ ಮೂಲೆಯಿಂದ ಮಠದ ಅಭಿಮಾನಿಗಳ, ಭಕ್ತರ ಗುಂಪುಗಳು ಶ್ರೀಮಠದ ಅನ್ನದಾಸೋಹಕ್ಕೆ ಲಕ್ಷಾಂತರ ಸಂಖ್ಯೆಯಲ್ಲಿ ರೊಟ್ಟಿಗಳನ್ನು, ಕ್ವಿಂಟಲ್ ಗಟ್ಟಲೆ ತರಕಾರಿಗಳನ್ನು, ದಿನಸಿ ಪದಾರ್ಥಗಳನ್ನು, ದವಸ ಧಾನ್ಯಗಳನ್ನು ಒಣ ಹಣ್ಣುಗಳನ್ನು ತುಪ್ಪ ವನ್ನು ತಂದು ರಾಶಿ ರಾಶಿ ಒಟ್ಟುತ್ತಾರೆ. ಅಷ್ಟೇ ಸಂಖ್ಯೆಯಲ್ಲಿ ಸ್ವಯಂಸೇವಕರ, ಎನ್‌ಎಸ್‌ಎಸ್ ತಂಡದವರ, ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು, ಮಹಿಳೆಯರು ತಂಡೋಪ ತಂಡವಾಗಿ ಅವರವರಿಗೆ ನಿಗದಿಗೊಳಿಸಿದ ಸಮಯದಲ್ಲಿ ಬಂದು ಸ್ವಚ್ಛಗೊಳಿಸುವ ಕಾಯಕದಿಂದ ಹಿಡಿದು ತರಕಾರಿ ಹೆಚ್ಚುವುದು, ಅಡುಗೆಗೆ ಸಹಾಯ ಮಾಡುವುದು, ಚಪಾತಿ ಲಟ್ಟಿಸುವುದು, ಬಡಿಸುವುದು, ಜನರನ್ನು ಸಾಲುಗಳಲ್ಲಿ ಬಿಡುವುದು, ಎಲ್ಲೂ ಮುಸುರೆ ಬೀಳದಂತೆ ನಿಗಾ ವಹಿಸುವುದು ಹೀಗೆ ಎಲ್ಲೆಡೆ ಕಾರ್ಯನಿರ್ವಹಿಸುತ್ತಾರೆ. ಇವರೆಲ್ಲರಿಗೂ ಮೇಲುಸ್ತುವಾರಿಯಲ್ಲಿ ಶ್ರೀಗಳು ನಿಂತು ಹಗಲಿರುಳೆನ್ನದೆ ದಣಿವರಿಯದ ಓಡಾಡಿ ನಿಗಾ ವಹಿಸುತ್ತಾ ಕೆಲವೊಮ್ಮೆ ತಾವೇ ಕಟ್ಟಿಗೆ ಹೊರುವ,ಬಡಿಸುವ, ಲಟ್ಟಿಸುವ, ತಂದು ಕೊಡುವ ಕೆಲಸ ಮಾಡುತ್ತಾ ಎಲ್ಲರನ್ನು ಹುರಿದುಂಬಿಸುತ್ತಾರೆ. ಇಷ್ಟು ಸಾಕಲ್ಲವೇ ಭಕ್ತರಿಗೆ. ಅಮಾವಾಸ್ಯೆಯ ದಿನ ದಾಸೋಹದ ಕೊನೆಯ ದಿನವಾಗಿರುತ್ತದೆ. ಇದಾದ ನಂತರ ಸ್ವಯಂಸೇವಕರಾಗಿ ಕಾರ್ಯನಿರ್ವಹಿಸಿದ ಪ್ರತಿಯೊಬ್ಬರನ್ನು ಶ್ರೀಮಠದ ಕಾರ್ಯಕ್ರಮಕ್ಕೆ ಆಹ್ವಾನಿಸಿ ಉಣಬಡಿಸಿ, ಸತ್ಕರಿಸಿ ಕಾರ್ಯನಿರ್ವಹಿಸಿದ್ದಕ್ಕಾಗಿ ಎಲ್ಲರಿಗೂ ಕೃತಜ್ಞತೆಯನ್ನು ವ್ಯಕ್ತಪಡಿಸಲು ಶ್ರೀಗಳು ಮತ್ತೊಂದು ಕಾರ್ಯಕ್ರಮವನ್ನೇ ನಡೆಸುತ್ತಾರೆ.

ಬನದ ಹುಣ್ಣಿಮೆಯ ಹಿಂದಿನ ದಿನವೇ ನಂದಿ, ಈಶ್ವರ, ಸೂರ್ಯ, ಚಂದ್ರ ಮತ್ತು ಪ್ರಣವ ಮಂತ್ರಗಳನ್ನು ಒಳಗೊಂಡಿರುವ ಬಸವಪಟ ಪೂಜೆ ಮಾಡಿ ಗವಿಸಿದ್ದೇಶ್ವರರ ಕರ್ತೃಗದ್ದುಗೆಯ ಸುತ್ತಲು ಐದು ಸುತ್ತು ಹಾಕಿ ನಂತರ ಮಠದ ಮುಂಭಾಗದ ಕಲ್ಲಿನ ಕಂಬಕ್ಕೆ ಕಟ್ಟುವ ಮೂಲಕ ಜಾತ್ರೆಯ ಕಾರ್ಯಕ್ರಮಕ್ಕೆ ನಾಂದಿ ಹಾಡುತ್ತಾರೆ. ಮರುದಿನ ಗವಿಸಿದ್ದೇಶ್ವರ ಮಹಾಸ್ವಾಮಿಗಳ ಉತ್ಸವ ಮೂರ್ತಿಯನ್ನು ಗವಿಮಠದ ಪಕ್ಕದಲ್ಲಿ ಸ್ಥಿತವಿರುವ ಕೆರೆಯಲ್ಲಿ ತೆಪ್ಪದಲ್ಲಿ ರಥೋತ್ಸವ ಮಾಡುವ ಮೂಲಕ ತೆಪ್ಪೋತ್ಸವವನ್ನು ಆಚರಿಸುತ್ತಾರೆ. ತೆಪ್ಪೋತ್ಸವವು ರಾತ್ರಿಯ ಸಮಯದಲ್ಲಿ ಜರುಗುವದರಿಂದ ದೀಪಾಲಂಕಾರ ಮತ್ತು ಕಣ್ಣು ಪೂರೈಸುವ ತೆಪ್ಪದ ಮೆರವಣಿಗೆ ಭಕ್ತಿ, ಭಾವ, ಸೌಂದರ್ಯಗಳ ಮೇಳವಿಕೆಯಂತೆ ಕಂಡುಬರುತ್ತದೆ. ಸಹಸ್ರಾರು ಭಕ್ತರು ಹಾಜರಿದ್ದರೂ ನೂಕು ನುಗ್ಗಲು, ಅಶಿಸ್ತು ಎಲ್ಲೂ ಕಂಡು ಬರುವುದಿಲ್ಲ.

ತೆಪ್ಪೋತ್ಸವದ ನಂತರವೂ ಕೂಡ ದಾಸೋಹಕ್ಕೆ ತೆರಳುವ ಜನರು ಅಲ್ಲೂ ಕೂಡ ಶಿಸ್ತಿನ ಸಿಪಾಯಿಗಳಂತೆ ದಾಸೋಹ ಸ್ವೀಕರಿಸುತ್ತಾರೆ. ಹುಣ್ಣಿಮೆಯಂದು ಅನ್ನಪೂರ್ಣೇಶ್ವರಿ ದೇವಿಗೆ ಉಡಿ ತುಂಬುವ ಕಾರ್ಯಕ್ರಮ. ಕೊಪ್ಪಳ ನಗರದ ಪಕ್ಕದ ಹಳ್ಳಿ ಇರಕಲಗಡದಿಂದ ಸಂತೋಷಿಮಾತೆಯನ್ನು ನಾಲ್ಕು ದಶಕಗಳಿಂದ ಪೂಜಿಸುತ್ತಿರುವ ಅಮ್ಮನವರು ಕಾಲ್ನಡಿಗೆಯಲ್ಲಿ ದೇವಸ್ಥಾನಕ್ಕೆ ಬಂದು ಅನ್ನಪೂರ್ಣೇಶ್ವರಿಗೆ ಉಡಿ ತುಂಬುತ್ತಾರೆ.... ಇದೀಗ ಊರಿನ ಹೆಂಗಳೆಯರ ಸರದಿ. ಊರಿನ ಪ್ರತಿ ಮನೆಯ ಹೆಣ್ಣು ಮಕ್ಕಳು ಕೂಡ ಉಡಿ ಸಾಮಾನುಗಳೊಂದಿಗೆ ದೇಗುಲಕ್ಕೆ ಆಗಮಿಸಿ ಅನ್ನಪೂರ್ಣೆಗೆ, ಸಂತೋಷಿಮಾತೆಯ ಪರಮ ಭಕ್ತ ಅಮ್ಮನಿಗೆ ಮೊದಲು ಉಡಿ ಸಮರ್ಪಿಸಿ ನಂತರ ಅಲ್ಲಿ ನೆರೆದ ಹೆಣ್ಣು ಮಕ್ಕಳಿಗೆ ತಮ್ಮ ಶಕ್ತ್ಯಾನುಸಾರ ಜಾತಿ,ಪಂಥಗಳ ಭೇದವಿಲ್ಲದೆ ಉಡಿ ತುಂಬುತ್ತಾರೆ. ಇಲ್ಲಿ ಭಕ್ತಿಯ ಜೊತೆಗೆ ದೇವಿಯ ದಿವ್ಯ ಶಕ್ತಿಯು ಹೆಣ್ಣು ಮಕ್ಕಳ ಪ್ರಭೆಯು ಸೇರಿ ಒಂದು ದೈವಿಕ ಕಳೆಯನ್ನು ಸೃಷ್ಟಿಸುತ್ತದೆ.

ಮರುದಿನ ಮುಂಜಾನೆ ಕೊಪ್ಪಳ ನಗರದ ಜಡೆ ಗೌಡರ ಮನೆಯಲ್ಲಿ ಶ್ರೀ ಗವಿಸಿದ್ದೇಶ್ವರನ ಮೂರ್ತಿಯನ್ನು ಪೂಜಿಸಿ ವಾದ್ಯ ವೃಂದದವರ ಸಮೇತ ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡುತ್ತಾ ಮಠಕ್ಕೆ ತರುತ್ತಾರೆ. ಮುದ್ದಾಬಳ್ಳಿ, ಹಲಗೇರಿ ಮತ್ತು ಮಂಗಳಾಪುರ ಗ್ರಾಮಗಳಿಂದಲೂ ಕೂಡ ಶ್ರೀ ಗವಿಸಿದ್ದೇಶ್ವರರ ಕಳಸ, ಮೂರ್ತಿಗಳನ್ನು ಮೆರವಣಿಗೆಯಲ್ಲಿ ಆಯಾ ಗ್ರಾಮಸ್ಥರ ನೇತೃತ್ವದಲ್ಲಿ ಮಠಕ್ಕೆ ತರಲಾಗುತ್ತದೆ. ಸಾಯಂಕಾಲ ನಿಶ್ಚಿತ ಮುಹೂರ್ತ



**ವೀಣಾ ಹೇಮಂತಗೌಡ ಪಾಟೀಲ್,**
**ಮುಂಡರಗಿ, ಗದಗ**

ಕಾಲದಲ್ಲಿ ಅತಿಥಿಗಳಿಂದ ಜಾತ್ರಾ ಮಹೋತ್ಸವ ಉದ್ಘಾಟನೆಗೊಂಡು ಗವಿಸಿದ್ದೇಶ್ವರನ ಉತ್ಸವ ಮೂರ್ತಿಯನ್ನು ಒಳಗೊಂಡ ಅಲಂಕೃತಗೊಂಡ ತೇರು ಭಕ್ತರ ಉಘೇ ಉಘೇ ಘೋಷದೊಂದಿಗೆ ಸಾಗುತ್ತದೆ. ಕೇವಲ ತಲೆಗಳು ಮಾತ್ರ ಕಾಣುವಂತಹ ಸಾಗರೋಪಾದಿಯಲ್ಲಿ ಜನರನ್ನೊಳಗೊಂಡ ಭಕ್ತ ಸಮೂಹ ರಥಸಾಗುವ ಹಾದಿಯಲ್ಲಿ ಉತ್ತತ್ತಿ, ಬಾಳೆಹಣ್ಣುಗಳನ್ನು ದೇವರಿಗೆ ಸಮರ್ಪಿಸುತ್ತಾ, ಹಾಗೆ ಎಸೆದಂತಹ ತಮಗೆ ದೊರೆತ ಬಾಳೆಹಣ್ಣು ಉತ್ತತ್ತಿಗಳನ್ನು ಮಹಾಪ್ರಸಾದವೆಂದು ಆಯ್ದುಕೊಂಡು ತಮ್ಮ ನೆಂಟರಿಷ್ಟರಿಗೆ ಹಂಚಿ ತಾವು ಸ್ವೀಕರಿಸುತ್ತಾರೆ.

ರಥೋತ್ಸವದ ಮರುದಿನ ಸಂಜೆ ಚಿಕ್ಕೇನಕೊಪ್ಪದ ಶರಣರು ದೀಡ ನಮಸ್ಕಾರವನ್ನು ಹಾಕುತ್ತಾರೆ. ಅಂದು ಅವರೊಂದಿಗೆ ಎಲ್ಲ ಜನಾಂಗದ ಜನರು ಕೂಡ ತಮ್ಮ ತಮ್ಮ ಸಂಕಲ್ಪದಂತೆ ದೀಡ ನಮಸ್ಕಾರವನ್ನು ಹಾಕುತ್ತಾರೆ. ಅಂದು ರಾತ್ರಿ ಶ್ರೀ ಮಠದ ವತಿಯಿಂದ ಮದ್ದು ಸುಡುವ ಮೂಲಕ ಆಗಸದಲ್ಲಿ ವಿವಿಧ ಬಗೆಯ ಬಣ್ಣಗಳ ಪಟಾಕಿಯ ಚಿತ್ತಾರಗಳ ಮೂಡುವಿಕೆ. ಕಣ್ಣು ಕೋರೈಸುವ ಬೆಳಕಿನ ಚಿತ್ತಾರ ಜನರ ಮನಗಳನ್ನು ಬೆಳಗುತ್ತದೆ.

ಹಳ್ಳಿಯ ಜನರಂತೂ ರಥೋತ್ಸವದ ದಿನ ಬೆಳಗಿನ ಸಮಯದಲ್ಲಿಯೇ ಗವಿಸಿದ್ದೇಶ್ವರನಿಗೆ ನೈವೇದ್ಯದ ಎಡೆಯನ್ನು ಮಡಿಯಿಂದ ತಂದುಕೊಟ್ಟು ದೇವರಿಗೆ ನಮಿಸಿ, ಕಾಯಿ ಒಡೆಸಿಕೊಂಡು ದಾಸೋಹ ಭವನದಲ್ಲಿ ಪ್ರಸಾದ ಸ್ವೀಕರಿಸುತ್ತಾರೆ. ರಥೋತ್ಸವದ ನಂತರ ಮಕ್ಕಳಿಗೆ ಅವರಿಷ್ಟದ ಸಾಮಗ್ರಿಗಳನ್ನು ಕೊಡಿಸಲು ಜಾತ್ರೆಯಲ್ಲಿ ತಿರುಗಾಡುತ್ತಾ..ಹೆಣ್ಣು ಮಕ್ಕಳು ಬಳೆ ಸಾಲಿನಲ್ಲಿಯೂ, ಪುಟ್ಟ ಮಕ್ಕಳು ಆಟದ ಸಾಮಾನುಗಳ ಸಾಲಿನಲ್ಲಿಯೂ, ಗಂಡಸರು ಒಕ್ಕಲುತನದ ಸಾಮಗ್ರಿಗಳನ್ನು ಖರೀದಿಸಲು ಮುಗಿ ಬೀಳುತ್ತಾರೆ. ಬಹುಶಹ ಬನಶಂಕರಿಯ ಜಾತ್ರೆಯ ನಂತರ ಕೊಪ್ಪಳ ಜಾತ್ರೆಯಷ್ಟು ವೈವಿಧ್ಯಮಯ ಜಾತ್ರೆ ಮತ್ತೆಲ್ಲೂ ಇಲ್ಲ. ಬಹಳಷ್ಟು ಗೌಜಿ ಗದ್ದಲಗಳ ಮಧ್ಯದಲ್ಲಿಯೂ ಶಿಸ್ತು, ಸಮಯಪ್ರಜ್ಞೆ, ಸಂಸ್ಕೃತಿಯ ಹಿರಿಮೆಯನ್ನು ಮೆರೆಯುವ ಏಕೈಕ ಜಾತ್ರೆ ಕೊಪ್ಪಳದ ಗವಿಸಿದ್ದೇಶ್ವರ ಮಠದ ಜಾತ್ರಾ ಮಹೋತ್ಸವ.

ಜಾತ್ರೆಯ ಮೊದಲ ಮೂರು ದಿನಗಳಲ್ಲಿ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರನ್ನು ಕರೆಸಿ, ಪರಿಚಯಿಸಿ ಅವರನ್ನು ಸನ್ಮಾನಿಸುತ್ತಾರೆ. ರಾತ್ರಿಯ ಹೊತ್ತಿನಲ್ಲಂತೂ ಸಾಂಸ್ಕೃತಿಕ ಲೋಕ ಕೈ ಬೀಸಿ ಕರೆಯುತ್ತದೆ. ಸಂಗೀತ, ನೃತ್ಯ, ನಾಟಕ, ಜಾನಪದ, ತತ್ವಪದ ಮುಂತಾದ ವೈವಿಧ್ಯಮಯ ಸಂಗೀತ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಜನರನ್ನು ಬೇರೊಂದು ಲೋಕಕ್ಕೆ ಕರೆದೊಯ್ಯುತ್ತವೆ. ಜೊತೆ ಜೊತೆಗೆ ಮನುಷ್ಯನನ್ನು ಭೌತಿಕತೆಯಿಂದ ಪಾರಮಾರ್ಥಿಕತೆಯೆಡೆಗೆ ಕರೆದೊಯ್ಯುವ ಆಧ್ಯಾತ್ಮಿಕ ಚಿಂತನೆಗಳು, ಗೋಷ್ಠಿಗಳು ವೈಚಾರಿಕತೆಯನ್ನು, ಆಧ್ಯಾತ್ಮಿಕ ನಿಲುವನ್ನು, ಧಾರ್ಮಿಕ ತಿಳುವಳಿಕೆಯನ್ನು ಜನರಲ್ಲಿ ಉಂಟುಮಾಡುತ್ತವೆ. ಇದೆಲ್ಲಕ್ಕೂ ಮೆರುಗು ನೀಡುವಂತೆ ಈ ಬಾರಿಯ ಜಾತ್ರೆಯಲ್ಲಿ ಅಂಗವಿಕಲರಿಗೆ ವಿವಾಹ ಮಾಡಿಸುವುದರ ಜೊತೆ ಜೊತೆಗೆ ಅವರಿಗೆ ಅವರವರ ಜಿಲ್ಲೆಗಳಲ್ಲಿ ಉದ್ಯೋಗ ಕೈಗೊಳ್ಳಲು ಬೇಕಾಗುವ ಮೂಲಭೂತ ಸೌಲಭ್ಯಗಳನ್ನು ಮೂಲಭೂತ ಸೌಲಭ್ಯಗಳನ್ನು ಸರಕಾರೇತರ ಸಂಸ್ಥೆಗಳ ಸಹಾಯದಿಂದ ಕೈಗೊಂಡಿದ್ದಾರೆ ... ಜಾತ್ರೆಗೆ ಒಂದು ವಾರ ಮುಂಚೆಯೇ ಈ ಸಾಮೂಹಿಕ ವಿವಾಹ ಕಾರ್ಯಕ್ರಮವು ನೆರವೇರಿದ್ದು ಗವಿಸಿದ್ದೇಶ್ವರ ಮಠ ಸಮಾಜದ ಅಲಕ್ಷಿತ ಜನರ ಸರ್ವಾಂಗೀಣ ಅಭಿವೃದ್ಧಿಗೆ ಮತ್ತೊಂದು ಹೊಸ ಆಯಾಮವನ್ನು ತೋರಿದೆ.

ಹೀಗೆ ಲಕ್ಷಾಂತರ ಜನ ಭಕ್ತರು ಸೇರುವ ತ್ರಿವಿಧದಾಸೋಹಗಳು ನಡೆಯುವ ದಕ್ಷಿಣ ಭಾರತದ ಮಹಾಕುಂಭಮೇಳ ಎಂಬ ಹೆಸರನ್ನು ಗಳಿಸಿರುವ ಕೊಪ್ಪಳದ ಗವಿಮಠದ ಜಾತ್ರೆ ಹಲವು ದಿನಗಳ ಕಾಲ ನಡೆದು ತೆರೆಮರೆಗೆ ಸರಿಯುತ್ತದೆ. ತಿಂಗಳಪರ್ಯಂತ ಜಾತ್ರೆಯ ನೆನಪನ್ನು ಮೆಲುಕು ಹಾಕುತ್ತಾ ಜನರು ಮುಂದಿನ ಜಾತ್ರೆಗಾಗಿ ಕಾಯುತ್ತಾರೆ. ಹಾಗಾದರೆ ನೀವೂ ಬರುವಿರಲ್ಲವೇ.... ಕೊಪ್ಪಳ ಜಾತ್ರೆಯ ನೋಡಲು, ಅನುಭವಿಸಲು ಕಣ್ತುಂಬಿಕೊಳ್ಳಲು.



## ಕವಿ ಮನಸು

### ಅಜ್ಜನ ಕನಸು

ಕಂಡರೆ ಕನಸುಗಳ ನಾವ್ ಕಾಣಬೇಕು
ಗವಿಯಜ್ಜನ ಕನಸಿನಂತಿರಬೇಕು
ಅಜ್ಜನು ಕನಸಲ್ಲಿ ಸದಾ ಬರುತಿರಬೇಕು
ಗವಿಯಜ್ಜನ ಕನಸ ನನಸ ಮಾಡಬೇಕು

ಬಡಮಕ್ಕಳ ಪಾಲಕರ ಗೋಳು ಕೇಳಿದನಲ್ಲ
ಗವಿಯಜ್ಜನ ಮನಸಿಗೆ ದುಃಖ ವಾಯಿತಲ್ಲ
ಕಣ್ಣೀರ ಧಾರೆ ಹೊಳೆಯಾಗಿ ಹರಿಯಿತಲ್ಲ
ಕೂಡಲೇ ಪ್ರಸಾದ ನಿಲಯ
ಸಂಕಲ್ಪವಾಯಿತಲ್ಲ

ಕನಸಿನ ಜೋಳಿಗೆ ಭಕ್ತರಲಿ ಹಂಚಿದನು
ದಾನದ ಮಂತ್ರವ ಅವರಲಿ ಬಿತ್ತಿದನು
ಹರಿಯಿತು ದಾನದ ಹೊಳೆ ಭಕ್ತಿಯಿಂದ
ಉದಿಸಿದೆ ಉಚಿತವಸತಿ ನಿಲಯ
ಭರದಿಂದ

ಅಜ್ಜನ ಜಾತ್ರೆಯ ಮಾಡುವ ಬನ್ನಿ
ಭಕ್ತಿಯ ಬುತ್ತಿಯ ನೋಡುವ ಬನ್ನಿ
ಜಾತ್ರೆಗೆ ಅಜ್ಜ ಏನನು ಕೇಳಲಿಲ್ಲ
ಭಕ್ತರ ಉದ್ಧಾರವೇ ಸಾಕೆಂದನಲ್ಲ

**ಕೆ ಎಂ ಬಸವರಾಜ**
ನಿವೃತ್ತ ಇಂಜನೀರ್, ಹೊಸಪೇಟೆ

### ಗಣರಾಜ್ಯೋತ್ಸವ



ವಿವಿಧತೆಯಲ್ಲಿ ಏಕತೆ ಸಾರುತ
ಬೆಳೆದು ನಿಂತಿಹುದು ಭವ್ಯ ಭಾರತ.
ಎಲ್ಲರಿಗೂ ಇಲ್ಲಿ ಒಂದೇ ನ್ಯಾಯ,
ಸಮಾನತೆ, ಸ್ವಾತಂತ್ರ್ಯ ಖಾತ್ರಿ.
ಸಾಮಾಜಿಕ ಸಾಮರಸ್ಯ, ಸಾಂಸ್ಕೃತಿಕವಾಗಿ
ಶ್ರೀಮಂತಿಕೆಯಾಗಿ ಬೆಳೆದಿಹಳು ತಾಯಿ
ಭಾರತಿ.
ಜವಾಬ್ದಾರಿಯುತ ನಾಗರಿಕರಾಗಿ
ಸಂವಿಧಾನದ
ಮೌಲ್ಯಗಳನ್ನು ಅರಿತು ಗೌರವದಿಂದ
ನಡೆಯೋಣ.
ದೇಶದ ಒಳಿತಿಗಾಗಿ ಭೇದ ಭಾವವಿಲ್ಲದೆ
ಕೈ ಜೋಡಿಸಿ ಪ್ರಗತಿ ಪಥದಲ್ಲಿ ಸಾಗೋಣ.

**– ಮಂಜುಶ್ರೀ ಮುರಳೀಧರ್.**
ತೋರಣಗಲ್ಲು, ಬಳ್ಳಾರಿ.

## ತುಂಗಭದ್ರಾ ನೀರಿನ ಮಟ್ಟ



ಶುಕ್ರವಾರ : 26-01-2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1588.64 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 270 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 9.934 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1617.91 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 8392 ಕ್ಯುಸೆಕ್ |
| ಸಾಮರ್ಥ್ಯ | 55.660 ಟಿಎಂಸಿ |

### ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.



ಮೈಕ್ರೋ ನ್ಯೂಸ್

## ವಿವಿಧತೆಯಲ್ಲಿ ಏಕತೆ ಹೊಂದಿದ ರಾಷ್ಟ್ರ ಭಾರತ: ಜಿಲ್ಲಾ ಉಸ್ತುವಾರಿ ಸಚಿವ ಬಿ.ನಾಗೇಂದ್ರ



**ಹಂಪಿ ಟೈಮ್ಸ್ ಬಳ್ಳಾರಿ**
ಭಾರತವು ಸಮಾಜವಾದ ತತ್ವ, ಪ್ರಜಾಪ್ರಭುತ್ವ, ಗಣರಾಜ್ಯದ ಮತ್ತು ಜಾತ್ಯತೀತ ತತ್ವದ ಸಾರ್ವಭೌಮತ್ವನ್ನು ಆಳವಡಿಸಿಕೊಂಡಿದ್ದು, ವಿವಿಧತೆಯಲ್ಲಿ ಏಕತೆಯನ್ನು ಹೊಂದಿದೆ. ಅನೇಕ ಭಾಷೆಗಳನ್ನು ಮಾತನಾಡುವ ಜನ ಹಾಗೂ ವಿವಿಧ ಸಾಂಸ್ಕೃತಿಕ ಹಿನ್ನಲೆಯನ್ನು ಹೊಂದಿರುವುದು ವೈಶಿಷ್ಟಮಯವಾಗಿದೆ ಎಂದು ಯುವ ಸಬಲೀಕರಣ, ಕ್ರೀಡೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಬಿ.ನಾಗೇಂದ್ರ ಅವರು ಹೇಳಿದರು.
ಜಿಲ್ಲಾಡಳಿತ ವತಿಯಿಂದ ನಗರದ ವಿಮ್ಸ್ ಮೈದಾನದಲ್ಲಿ ಏರ್ಪಡಿಸಿದ್ದ 75ನೇ ಗಣರಾಜ್ಯೋತ್ಸವ ದಿನಾಚರಣೆ ನಿಮಿತ್ತ ಧ್ವಜಾರೋಹಣ ನೆರವೇರಿಸಿ, ಪಥ ಸಂಚಲನ ಪಡೆಗಳಿಂದ ಗೌರವ ವಂದನೆ ಸ್ವೀಕರಿಸಿ ಧ್ವಜಾರೋಹಣಾ ಸಂದೇಶ ನೀಡಿ ಅವರು ಮಾತನಾಡಿದರು. ದೇಶಕ್ಕೆ ಪ್ರಜಾಪ್ರಭುತ್ವದ ಆಡಳಿತ ಪದ್ಧತಿಯನ್ನು ಅಳವಡಿಸಿಕೊಂಡ ಸಂಭ್ರಮದ ದಿನ ಇಂದು. 1950 ರಂದು ಜನವರಿ 26 ರಂದು ಇಡೀ ಸ್ವತಂತ್ರ ಭಾರತವನ್ನು 'ಗಣರಾಜ್ಯವೆಂದು' ಘೋಷಿಸಲಾಯಿತು. ಅದೇ ದಿನದಂದು ಮಹಾನ್ ಮಾನವತಾವಾದಿ ಡಾ.ಬಿ.ಆರ್.ಅಂಬೇಡ್ಕರ್ ಅವರು ರಚಿಸಿದ ಭಾರತದ ಸಂವಿಧಾನ ಜಾರಿಗೊಂಡಿತು. ಭಾರತದ ಸಂವಿಧಾನ ಶಿಲ್ಪಿ, ಮಹಾನ್ ಮಾನವತಾವಾದಿ, ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರನ್ನು ಸದಾ ಸ್ಮರಿಸಲೇಬೇಕು ಎಂದು ಮನನ ಮಾಡಿದರು.

## ತಾತ್ಕಾಲಿಕ ಅತಿಥಿ ಉಪನ್ಯಾಸಕರ ನೇಮಕಕ್ಕೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**
ಕರ್ನಾಟಕ ಸರ್ಕಾರದ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯಡಿ ಕಾರ್ಯನಿರ್ವಹಿಸುವ ಸ್ವಾಯತ್ತ ಸಂಸ್ಥೆಯಾದ ಮರಿಯಮ್ಮನಹಳ್ಳಿಯಲ್ಲಿ ಸ್ಥಾಪಿತವಾ ಗಿರುವ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದಲ್ಲಿ ವಿವಿಧ ವಿಭಾಗದ ವಿಷಯಗಳನ್ನು ಬೋಧಿಸಲು ಅತಿಥಿ ಉಪನ್ಯಾಸಕರನ್ನು (ತಾತ್ಕಾಲಿಕವಾಗಿ) ನೇಮಕ ಮಾಡಿಕೊಳ್ಳಲು ಅರ್ಜಿಯನ್ನು ಆಹ್ವಾನಿಸಲಾಗಿದೆ.
ಬಿಇ ಇನ್ ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಶನ್ ಎಂಜಿನಿಯರಿಂಗ್ ವಿಭಾಗ ಮತ್ತು ಬಿಇ ಇನ್ ಎಲೆಕ್ಟ್ರಿಕಲ್ ಅಂಡ್ ಎಲಾಕ್ಟ್ರಾನಿಕ್ಸ್ ಎಂಜಿನಿಯರಿಂಗ್ ವಿಭಾಗದಲ್ಲಿ ತಲಾ ಎರಡು ಅತಿಥಿ ಉಪನ್ಯಾಸಕರ ಹುದ್ದೆಗಳು ಖಾಲಿ ಇದ್ದು ಬಿಇ ಇನ್ ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಶನ್ ಎಂಜಿನಿಯರಿಂಗ್ ಮತ್ತು ಬಿಇ ಇನ್ ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಶನ್ ಎಂಜಿನಿಯರಿಂಗ್ ವಿದ್ಯಾರ್ಹತೆ ಹೊಂದಿರುವ ಮತ್ತು 2 ವರ್ಷದ ಬೋಧನೆ ಅಥವಾ ಕೈಗಾರಿಕಾ ಅನುಭವ ಇರುವವರು ಅರ್ಜಿ ಸಲ್ಲಿಸಬಹುದಾಗಿದೆ.
ಅದೇ ರೀತಿ ಎಂಟೆಕ್ ಇನ್ ಮೆಕ್ಯಾನಿಕಲ್ ಎಂಜಿನಿಯರಿಂಗ್ ಡೊಮೈನ್ ವಿಭಾಗ ಹಾಗೂ ಎಂಟೆಕ್ ಇನ್ ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಷನ್ ಎಂಜಿನಿಯರಿಂಗ್ ಡೊಮೈನ್ ವಿಭಾಗದಲ್ಲಿ ತಲಾ ಒಂದು ಹುದ್ದೆಗಳು ಖಾಲಿ ಇದ್ದು ಎಂಟೆಕ್ ಇನ್ ಮೆಕ್ಯಾನಿಕಲ್ ಎಂಜಿನಿಯರಿಂಗ್ ಡೊಮೈನ್ ಮತ್ತು ಎಂಟೆಕ್ ಇನ್ ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಷನ್ ಎಂಜಿನಿಯರಿಂಗ್ ಡೊಮೈನ್ ವಿದ್ಯಾರ್ಹತೆ ಮತ್ತು 3 ವರ್ಷದ ಬೋಧನೆ ಅಥವಾ ಕೈಗಾರಿಕಾ ಅನುಭವ ಇರುವವರು ಅರ್ಜಿ ಸಲ್ಲಿಸಬಹುದಾಗಿದೆ.
ಅದೆ ರೀತಿ ಎಂಎಸ್ಸಿ (ಮಾಸ್ಟರ್ ಆಫ್ ಸಾಯನ್ಸ್) ವಿಭಾಗದಲ್ಲಿ 1 ಹುದ್ದೆ ಖಾಲಿ ಇದ್ದು ಎಂಎಸ್ಸಿ (ಮಾಸ್ಟರ್ ಆಫ್ ಸಾಯನ್ಸ್) ವಿದ್ಯಾರ್ಹತೆ ಹೊಂದಿರುವ 3 ವರ್ಷದ ಬೋಧನಾ ಅನುಭವ ಇರುವವರು ಅರ್ಜಿ ಸಲ್ಲಿಸಬಹುದಾಗಿದೆ.
ಸಂದರ್ಶನವು ಜನವರಿ 29ರ ಮಧ್ಯಾಹ್ನ 2 ಗಂಟೆಗೆ ನಡೆಯಲಿದೆ. ಆಸಕ್ತರು, gttcmmhalli@gmail.com ಇ-ಮೇಲ್ ಐಡಿಗೆ ಸ್ವ-ವಿವರವುಳ್ಳ ಬಯೋಡೆಟಾವನ್ನು ಕಳುಹಿಸಬಹುದು. ಹೆಚ್ಚಿನ ಮಾಹಿತಿಗಾಗಿ ಮೊ:9845416198 ಸಂಪರ್ಕಿಸಬಹುದಾಗಿದೆ ಎಂದು ಹೊಸಪೇಟೆಯ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದ ಪ್ರಾಂಶುಪಾಲರು ತಿಳಿಸಿದ್ದಾರೆ.

# ಅಂತೂ ಹಂಪಿ ರಸ್ತೆಗೆ ಡಾಂಬರೀಕರಣ

**ಹಂಪಿ ಟೈಮ್ಸ್ ಹೊಸಪೇಟೆ**
ನನಗರ ಹಂಪಿ ರಸ್ತೆಯ ಶ್ರೀ ವಾಸವಿ ಕಲ್ಯಾಣ ಮಂಟಪದ ಸಮೀಪದ ಮುಖ್ಯ ರಸ್ತೆಯಲ್ಲಿ ಯುಜಿಡಿ ಕಾಮಗಾರಿಗಾಗಿ ಗುತ್ತಿಗೆದಾರರು ರಸ್ತೆ ಅಗೆದು ನಾಲ್ಕೈದು ತಿಂಗಳಾದರೂ ದುರಸ್ತಿ ಮಾಡದೇ ಹಾಗೆ ಬಿಡಲಾಗಿತ್ತು. "ದುರಸ್ತಿ ಕಾಣದ ನಗರದ ಹಂಪಿ ರಸ್ತೆ, ಪ್ರಯಾಣಿಕರ ಪ್ರಾಣದ ಜೊತೆ ಚೆಲ್ಲಾಟ" ಶೀರ್ಷಿಕೆಯಡಿ ಹಂಪಿ ಟೈಮ್ಸ್ ಪತ್ರಿಕೆಯಲ್ಲಿ ಸುದ್ದಿ ಪ್ರಕಟಿಸಲಾಗಿತ್ತು. ಸುದ್ದಿ ಪ್ರಕಟವಾದ ನಂತರ ಸಂಬಂಧಿಸಿದ ಅಧಿಕಾರಿಗಳು ಜಿಲ್ಲಾಡಳಿತದ ಸೂಚನೆ ಮೇರೆಗೆ ರಸ್ತೆ ದುರಸ್ತಿಗೊಳಿಸಿರುವುದರಿಂದ ಸಾವಿರಾರು ವಾಹನ ಸವಾರರು ನಿಟ್ಟುಸಿರುಬಿಟ್ಟಂತಾಗಿದೆ. ತಡವಾಗಿಯಾದರೂ ಜನರ ಪ್ರಾಣದ ಬಗ್ಗೆ ಎಚ್ಚೆತ್ತುಕೊಂಡ ಅಧಿಕಾರಿಗಳು ರಸ್ತೆ ದುರಸ್ತೆಗೊಳಿಸಿದ್ದಕ್ಕೆ ವಾಹನ ಸವಾರರು, ಪ್ರಯಾಣಿಕರು ಜಿಲ್ಲಾಡಳಿತಕ್ಕೆ ಧನ್ಯವಾದಗಳನ್ನು ತಿಳಿಸಿದ್ದಾರೆ.


ಹಂಪಿ ಟೈಮ್ಸ್
ದುರಸ್ತಿ ಕಾಣದ ನಗರದ ಹಂಪಿ ರಸ್ತೆ ಪ್ರಯಾಣಿಕರ ಪ್ರಾಣದ ಜೊತೆ ಚೆಲ್ಲಾಟ
ಹಂಪಿ ಉತ್ಸವಕ್ಕೆ ದಿನಗಣನೆ ಆರಂಭವಾಗಿದೆ, ವಿಜಯನಗರ ಜಿಲ್ಲಾ ಕೇಂದ್ರದಲ್ಲಿ ಜನಪ್ರತಿನಿಧಿಗಳು, ಅಧಿಕಾರಿಗಳು ಇದ್ದಾರೆಯೇ? ಎಂಬ ಪ್ರಶ್ನೆ ಜನತೆಗೆ ಕಾಡುತ್ತಿದ್ದು, ಇನ್ನಾವಾಗ ದುರಸ್ತಿ ಎನ್ನುತ್ತಿದ್ದಾರೆ ಪ್ರಯಾಣಿಕರು..




# ಹಂಪಿಯಲ್ಲಿ ವಸ್ತ್ರಸಂಹಿತೆ ಜಾರಿ

## ಶ್ರೀ ವಿರೂಪಾಕ್ಷೇಶ್ವರ ದರ್ಶನಕ್ಕೆ ತುಂಡುಡುಗೆ ನಿಷೇಧ ಭಾರತೀಯ ಪಂಚೆ ತೊಟ್ಟು ದರ್ಶನ ಪಡೆದ ವಿದೇಶಿಗರು



**ಹಂಪಿ ಟೈಮ್ಸ್ ಹೊಸಪೇಟೆ**
ಪ್ರಸಿದ್ಧ ಪ್ರವಾಸಿ ತಾಣವಾದ ವಿಜಯನಗರ ಜಿಲ್ಲೆಯ ಹಂಪಿಗೆ ಬರುವ ಭಕ್ತಾದಿಗಳಲ್ಲಿ ಭಕ್ತಿ ಭಾವನೆ ಮೂಡಿಸುವ ಸದುದ್ದೇಶದಿಂದ ಜಿಲ್ಲಾಡಳಿತವು ಹೊಸ ಹಜ್ಜೆ ಇರಿಸಿದೆ. ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ ಅವರು ಜನವರಿ 26ರಂದು ಖುದ್ದು ಹಂಪಿಗೆ ತೆರಳಿ ಶಾಸಕರಾದ ಹೆಚ್.ಆರ್.ಗವಿಯಪ್ಪ ಅವರೊಂದಿಗೆ ಹಂಪಿಯ ಶ್ರೀ ವಿರುಪಾಕ್ಷೇಶ್ವರನ ಸನ್ನಿಧಿಯಲ್ಲಿ ವಿಶೇಷ ಕಾರ್ಯಾಚರಣೆ ನಡೆಸಿದರು. ಜೀನ್ಸ್ ಪ್ಯಾಂಟ್ ಮತ್ತು ಬರಮೋಡ ತೊಟ್ಟು ಬಂದ ಭಕ್ತರೊಂದಿಗೆ ಆತ್ಮೀಯವಾಗಿ ಮಾತನಾಡಿದರು. ಹಂಪಿಯು ಬರೀ ಪ್ರವಾಸಿತಾಣವಲ್ಲ; ಅದು ಶ್ರೀ ವಿರುಪಾಕ್ಷೇಶ್ವರ ದೇವರ ಪವಿತ್ರ ತಾಣವೂ ಆಗಿದೆ ಎಂದು ಮನವರಿಕೆ ಮಾಡಿದರು. ಸಾಂಪ್ರದಾಯಿಕ ಶೈಲಿಯ ಬಟ್ಟೆ ಧರಿಸಿ ದೇವರ ದರ್ಶನ ಪಡೆಯಲು ತಿಳಿಸಿ ಜನಜಾಗೃತಿ ಮೂಡಿಸಿದರು.

**ಡಿಸಿಯಿಂದ ಭಕ್ತಿ ಜಾಗೃತಿ :**
ಜನವರಿ 26ರಂದು ಹಂಪಿಯ ಶ್ರೀ ವಿರುಪಾಕ್ಷೇಶ್ವರ ದೇವಾಲಯಕ್ಕೆ ತೆರಳಿದ ವೇಳೆ ಜಿಲ್ಲಾಧಿಕಾರಿಗಳು ತಾವೇ ಖುದ್ದು ಭಕ್ತರಿಗೆ, ಪ್ರವಾಸಿಗರಿಗೆ ಪಂಚೆ, ಶಲ್ಲೆ ನೀಡಿದರು. ತುಂಬುಡುಪು ಧರಿಸಿ ದೇವಸ್ಥಾನ ಪ್ರವೇಶಿಸುವಂತೆ ಮಾಡಿದರು. ಈ ಮೂಲಕ ಜನರಲ್ಲಿ ದೇವಾಲಯದ ಬಗ್ಗೆ ಭಕ್ತಿ ಭಾವನೆ ಬರುವಂತೆ ಇತರರಿಗೆ ಪ್ರೇರೇಪಣೆ ನೀಡಿ ಗಮನ ಸೆಳೆದರು.

**ಬಹಳ ದಿನಗಳ ಬೇಡಿಕೆ:**
ಹಂಪಿಯು ಪ್ರವಾಸಿ ತಾಣದ ಜೊತೆಗೆ ಸುಪ್ರಸಿದ್ಧ ಭಕ್ತಿಯ ಕೇಂದ್ರವೂ ಆಗಿದೆ. ಆದರೆ, ಕೆಲವು ಪ್ರವಾಸಿಗರು ಹಂಪಿಗೆ ಬಂದಾಗ ಬರಮೋಡ್ ಮತ್ತು ಜೀನ್ಸ್‌ಪ್ಯಾಂಟ್‌ನಂತಹ ತುಂಡುಡುಗೆ ಧರಿಸಿಯೇ ಶ್ರೀವಿರುಪಾಕ್ಷೇಶ್ವರನ ದೇವಸ್ಥಾನ ಪ್ರವೇಶಿಸುತ್ತಿದ್ದುದು ಸಾಮಾನ್ಯವಾಗಿತ್ತು. ಇದನ್ನು ಸಾರ್ವಜನಿಕರು ಅನೇಕ ಭಾರಿ ಪ್ರಶ್ನಿಸಿದ್ದರು. ಹೀಗಾಗಿ ಅನೇಕ ದಿನಗಳ ಸಾರ್ವಜನಿಕರ ಬೇಡಿಕೆಯನ್ನು ಪರಿಗಣನೆಗೆ ತೆಗೆದುಕೊಂಡ ಜಿಲ್ಲಾಡಳಿತವು ಅಗತ್ಯ ಕ್ರಮವಹಿಸಿ ಹೊಸ ಪರಂಪರೆಗೆ ಅವಕಾಶ ಕಲ್ಪಿಸಿದೆ.

**ದೇವಸ್ಥಾನದ ಸೇವೆಗೆ ಗಣಕೀಕರಣ:**
ದೇವಸ್ಥಾನದಲ್ಲಿ ಭಕ್ತಿಯ ಸೇವೆಗಳಿಗೆ ಭೌತಿಕವಾಗಿ ರಸೀದಿ ನೀಡಿ ಹಣ ಪಡೆಯುವ ವ್ಯವಸ್ಥೆ ಇತ್ತು. ಇದನ್ನು ಇದೀಗ ಸಂಪೂರ್ಣವಾಗಿ ಗಣಕೀಕರಣಗೊಳಿಸುವುದಕ್ಕೆ ಸಹ ಜಿಲ್ಲಾಧಿಕಾರಿಗಳು ಜನವರಿ 26ರಂದು ವಿಶೇಷ ಕ್ರಮ ವಹಿಸಿದರು. ಮೊದಲನೇಯದಾಗಿ ಶಾಸಕರಿಂದಲೇ ಹಣ ಪಡೆದು ರಸೀದಿ ನೀಡಿ ಸೇವೆಗೆ ಜಿಲ್ಲಾಧಿಕಾರಿಗಳು ಅವಕಾಶ ಕಲ್ಪಿಸಿದರು. ಇದರಿಂದ ಸೋರಿಕೆ ತಡೆದು ದೇವಸ್ಥಾನಕ್ಕೆ ಹೆಚ್ಚಿನ ಆದಾಯ ಬರುವಂತಾಗಲಿದೆ.

**ಮೆಟಲ್ ಡಿಟೆಕ್ಟರ್ ಅಳವಡಿಸಲು ಕ್ರಮ:**
ಹಂಪಿ ಮತ್ತು ಹಂಪಿಯ ವಿರುಪಾಕ್ಷೇಶ್ವರ ದೇವಸ್ಥಾನಕ್ಕೆ ಪ್ರತಿ ದಿನ ಲಕ್ಷಕ್ಕೂ ಹೆಚ್ಚು ಭಕ್ತರು ಬರುತ್ತಿದ್ದು, ಇದರಿಂದಾಗಿ ದೇವಸ್ಥಾನದ ಆವರಣದಲ್ಲಿ ಯಾವುದೇ ರೀತಿಯ ಅಹಿತಕರ ಘಟನೆಗಳು ನಡೆಯದಂತೆ ದೇವಸ್ಥಾನದಲ್ಲಿ ಮೆಟಲ್ ಡಿಟೆಕ್ಟರನ್ನು ಅಳವಡಿಸಲು ಸಹ ಜನವರಿ 26ರಂದು ಜಿಲ್ಲಾಡಳಿತದಿಂದ ಕ್ರಮ ವಹಿಸಲಾಯಿತು.

**ಜಿಲ್ಲಾಧಿಕಾರಿಗಳ ಪ್ರತಿಕ್ರಿಯೆ:**
ಹಂಪಿಯು ಪ್ರವಾಸಿ ತಾಣದ ಜೊತೆಗೆ ಭಕ್ತಿಯ ಶ್ರದ್ಧಾ ಕೇಂದ್ರವಾಗಿದೆ. ಪ್ರವಾಸಕ್ಕೆ ಬರುವವರು ದೇವಸ್ಥಾನಕ್ಕೆ ಭೇಟಿ ನೀಡುವ ಸಂದರ್ಭದಲ್ಲಿ ಭಕ್ತಿ ಭಾವನೆ ಉದ್ದೀಪನೆಯ ಉಡುಪು ಧರಿಸಿ ದೇವರ ದರ್ಶನ ಪಡೆಯುವ ಸದುದ್ದೇಶದಿಂದ ಜನರಿಗೆ ವಿಶೇಷ ಸಂದೇಶ ಹೋಗುವ ನಿಟ್ಟಿನಲ್ಲಿ ಜಿಲ್ಲಾಡಳಿತದಿಂದ ವಿಶೇಷ ಕ್ರಮ ವಹಿಸಿದ್ದೇವೆ. ದೇವರ ದರ್ಶನ ವೇಳೆಯಲ್ಲಿ ದೇವಸ್ಥಾನದಲ್ಲಿ ಪಂಚೆ, ಶಲ್ಲೆ ಪಡೆಯಲು ಯಾವುದೇ ಶುಲ್ಕ ನಿಗದಿಪಡಿಸಿಲ್ಲ ಎಂದು ಇದೆ ವೇಳೆ ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ ಅವರು ಪ್ರತಿಕ್ರಿಯಿಸಿದ್ದಾರೆ.
ಈ ಸಂದರ್ಭದಲ್ಲಿ ಶಾಸಕ ಎಚ್.ಆರ್.ಗವಿಯಪ್ಪ, ಸಹಾಯಕ ಆಯುಕ್ತರಾದ ಮಹದ್ ಅಲಿ ಅಕ್ರಮ ಷಾಹ ಹಾಗೂ ಹಂಪಿ ಗ್ರಾಮಸ್ಥರು ಮತ್ತು ಪ್ರವಾಸಿಗರು ಹಾಗು ಅಧಿಕಾರಿಗಳು ಇದ್ದರು.









# ಶಾಸಕ ನೇಮಿರಾಜನಾಯ್ಕ ಕ್ಷಮೆಯಾಚಿಸಲಿ ಎಂದ ರೈತರು

**ಹಂಪಿ ಟೈಮ್ಸ್ ಕೊಟ್ಟೂರು**
ರಾಷ್ಟ್ರೀಯ ಹಬ್ಬಗಳ ಆಚರಣೆ ಸಂದರ್ಭದಲ್ಲಿ ರಾಷ್ಟ್ರಗೀತೆ, ನಾಡಗೀತೆ ರೈತ ಗೀತೆ ಹಾಡುವುದು ಸರ್ಕಾರದ ಆದೇಶವಿದ್ದರೂ 75ನೇ ಗಣರಾಜ್ಯೋತ್ಸವದಲ್ಲಿ ಕೊಟ್ಟೂರು ತಾಲೂಕು ಆಡಳಿತ ರೈತಗೀತೆ ನಿರ್ಲಕ್ಷ್ಯಿಸಿದ್ದರಿಂದ ತಾಲೂಕು ಆಡಳಿತ ವಿರುದ್ಧ ಸಾರ್ವಜನಿಕರು ಮತ್ತು ರೈತರು ಆಕ್ಷೇಪ ವ್ಯಕ್ತಪಡಿಸಿದರು.
ಶಾಸಕ ಕೆ.ನೇಮಿರಾಜ್ ನಾಯ್ಕ್ ಹಗರಿಬೊಮ್ಮನಹಳ್ಳಿ ತಾಲೂಕು ಆಡಳಿತ ಆಯೋಜಿಸಿದ್ದ 75ನೇ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಭಾಗಿಯಾ ಗುವ ಅವಸರದ ನಿಟ್ಟಿನಲ್ಲಿ, ಕೊಟ್ಟೂರು ತಾಲೂಕು ಆಡಳಿತ ಆಯೋಜಿಸಿದ ಕಾರ್ಯಕ್ರಮದಲ್ಲಿ ರೈತ ಗೀತೆಯ ನಿರ್ಲಕ್ಷ್ಯತೆಗೆ ಮುಖ್ಯ ಕಾರಣವಾಗಿದೆ ಎನ್ನಲಾಗಿದೆ. ಸಾರ್ವಜನಿಕರ ಚರ್ಚೆ.
ರಾಷ್ಟ್ರಗೀತೆ, ನಾಡಗೀತೆ ಜೊತೆಗೆ ರೈತ ಗೀತೆಯನ್ನು ರಾಷ್ಟ್ರೀಯ ಮತ್ತು ಸರ್ಕಾರದ ಕಾರ್ಯಕ್ರಮಗಳಲ್ಲಿ ಹಾಡುವ ಸರ್ಕಾರದ ಆದೇಶ ಇದ್ದರು, ತಾಲೂಕು ಆಡಳಿತ, ಕಾರ್ಯಕ್ರಮದ ಅಧ್ಯಕ್ಷರು, ತಹಶಿಲ್ದಾರ ಅಮರೇಶ್ ಜಿ.ಕೆ ವೇದಿಕೆಯಲ್ಲಿ ರೈತಗೀತೆ ಕಡೆಗಣಿಸಿದ್ದಾರೆ. ದೇಶಕ್ಕೆ ಅನ್ನ ಕೊಡುವ ರೈತನನ್ನು ಮತ್ತು ಸರ್ಕಾರದ ಅದೇಶವನ್ನು ಇದು ಅವಮಾನಿಸಿದಂತೆ ಎಂದು ಕೊಟ್ಟೂರು ತಾಲೂಕು ರೈತ ಸಂಘದ ಮುಖಂಡರು ಆಕ್ರೋಶ ವ್ಯಕ್ತಪಡಿಸಿದರು. ಕ್ಷೇತ್ರದ ಶಾಸಕರು ರೈತ ಪರ ಜೆಡಿಎಸ್ ಪಕ್ಷದಲ್ಲಿ ಗೆದ್ದು, ಕ್ಷೇತ್ರದ ಅಧಿಕಾರದ ಚುಕ್ಕಾಣಿ ಹಿಡಿದಿದ್ದರು, ಕಾರ್ಯಕ್ರಮದ ಪ್ರಜ್ಞೆ ಇಲ್ಲದೆ, ರೈತ ಗೀತೆಯನ್ನು ಇಂದು ನಿರ್ಲಕ್ಷ್ಯಿಸಿ, ಗಣರಾಜ್ಯೋತ್ಸವದಲ್ಲಿ ನಾಡಿನ ರೈತರ ಅಗೌರವಕ್ಕೆ ಕಾರಣರಾಗಿದ್ದಾರೆ, ರೈತರ ಮೇಲೆ ಗೌರವ, ಮಾನ್ಯ ಶಾಸಕರಲ್ಲಿದ್ದರೆ, ನಾಡಿನ ರೈತರಿಗೆ ತಕ್ಷಣ ಕ್ಷಮೆ ಯಾಚಿಸಬೇಕು ಎಂದು ಆಗ್ರಹಿಸಿದರು. ಕೊಟ್ಟೂರು ತಾಲೂಕಿನ ಗಣರಾಜ್ಯೋತ್ಸವದಲ್ಲಿ ರೈತ ಗೀತೆಯನ್ನು ತಾಲೂಕು ಆಡಳಿತ ನಿರ್ಲಕ್ಷ್ಯ ವಹಿಸಿರುವುದಕ್ಕೆ ಜಿಲ್ಲಾಧಿಕಾರಿಗಳ ಗಮನಕ್ಕೆ ತರುತ್ತೇವೆ ಎಂದು ರೈತ ಸಂಘದ ಜಿಲ್ಲಾ ಕಾರ್ಯಾಧ್ಯಕ್ಷ ಕೆ.ಎಸ್. ಜಯಪ್ರಕಾಶ ನಾಯ್ಕ್, ತಾಲ್ಲೂಕು ಅಧ್ಯಕ್ಷ ಮಂಜುನಾಥ, ಜಿಲ್ಲಾ ಸಂಘದ ಮುಖಂಡರು ಕೊಟ್ರಯ್ಯ, ನೀಲನ ಕಂಠನ ಗೌಡ್ರು, ರಮೇಶ್ ನಾಯ್ಕ್, ಸುರೇಶ್ ನಾಯ್ಕ್ ಮತ್ತು ಕೊಟ್ಟೂರು ತಾಲೂಕು ಎಸ್ ಡಿ ಎಂ ಸಿ ಅದ್ಯಕ್ಷರು ಕೆ. ಹರೀಶ್. ಮತ್ತು ವಿವಿಧ ಸಂಘಟನೆಯ ಪಧಾದಿಕಾರಿಗಳು ತಿಳಿಸಿದರು.

## ಸಂವಿಧಾನ ಸರ್ವರಿಗೂ ಸಮಾನ ಹಕ್ಕು ಒದಗಿಸಿದೆ



**ಹಂಪಿ ಟೈಮ್ಸ್ ಹರಪನಹಳ್ಳಿ**
ಸಂವಿಧಾನದಲ್ಲಿ ಎಲ್ಲರಿಗೂ ಸಮಾನ ಹಕ್ಕುಗಳನ್ನು ಒದಗಿಸಲಾಗಿದೆ. ಅವುಗಳನ್ನು ಪ್ರತಿಯೊಬ್ಬರು ಗೌರವಿಸುವುದು ನಮ್ಮೆಲ್ಲರ ಜವಾಬ್ದಾರಿ ಎಂದು ಶಾಸಕಿ ಎಂ.ಪಿ.ಲತಾ ಮಲ್ಲಿಕಾರ್ಜುನ್ ತಿಳಿಸಿದರು.
ಪಟ್ಟಣದ ತಾಲ್ಲೂಕು ಕ್ರೀಡಾಂಗಣದಲ್ಲಿ ತಾಲೂಕು ಆಡಳಿತ ಶುಕ್ರವಾರ ಆಯೋಜಿಸಿದ್ದ 75.ನೇ ಗಣ ರಾಜ್ಯೋತ್ಸವ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಡಾ.ಬಿ.ಆರ್.ಅಂಬೇಡ್ಕರ ನೇತೃತ್ವದ ಸಮಿತಿ ಸಂವಿಧಾನ ರಚಿಸಿ, ಭಾರತದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಜಾರಿಗೆ ಕಾರಣರಾಗಿದ್ದಾರೆ ಎಂದರು.
ರಾಜ್ಯ ಸರ್ಕಾರ ಜಾರಿಗೆ ತಂದಿರುವ ಗೃಹಲಕ್ಷ್ಮಿ 12 ಕೋಟಿ , ಶಕ್ತಿ ಯೋಜನೆಗೆ 8 ಕೋಟಿ ಸೌಲಭ್ಯ ನಮ್ಮ ತಾಲ್ಲೂಕಿನ ಜತೆಗೆ ಲಭಿಸಿರುವುದು ಸಂತಸ ತಂದಿದೆ. ತಾಂತ್ರಿಕ ದೋಷದಿಂದ ಕೆಲವರಿಗೆ ಸೌಲಭ್ಯ ದೊರೆತಿಲ್ಲ, ಅವುಗಳನ್ನು ಶೀಘ್ರ ವಿಲೇವಾರಿ ಮಾಡಲು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿರುವೆ ಎಂದರು.
ಧ್ವಜಾರೋಹಣ ನೆರವೇರಿಸಿದ ಉಪವಿಭಾಗಾಧಿಕಾರಿ ಟಿ.ವಿ.ಪ್ರಕಾಶ, ಭಾರತ ಸ್ವಾತಂತ್ರಗೊಂಡಾಗ ಗಣಗಳಾಗಿದ್ದವು. ಅವುಗಳನ್ನೆಲ್ಲಾ ಒಗ್ಗೂಡಿಸಿದ ಕೀರ್ತಿ ಡಾ.ಬಿ.ಆರ್.ಅಂಬೇಡ್ಕರ ಅವರಿಗೆ ಸಲ್ಲುತ್ತದೆ. ಸಂವಿಧಾನ ಜಾರಿಗೆ ತರುವ ಮೂಲಕ ಗಣಗಳನ್ನು ಒಟ್ಟುಗೂಡಿಸಿದರು. ಸಂವಿಧಾನದ ಆಶಯಗಳಿಗೆ ದಕ್ಕೆ ತರದಂತೆ ನಾವೆಲ್ಲರೂ ಕೈಲಾದಮಟ್ಟಿಗೆ ದೇಶದ ಉನ್ನತಿಗಾಗಿ ಸೇವೆ ಸಲ್ಲಿಸೋಣ ಎಂದು ಸಂದೇಶ ನೀಡಿದರು.
ಕೃಷಿ, ಶಿಕ್ಷಣ, ಯೋಗ, ಚಿತ್ರಕಲಾ ಸ್ಪರ್ಧೆಯಲ್ಲಿ ವಿಜೇತರಾದವರನ್ನು ಸನ್ಮಾನಿಸಲಾಯಿತು. ವಯೋ ನಿವೃತ್ತಿ ಹಂತದಲ್ಲಿರುವ ಉಪವಿಬಾಗಾಧಿಕಾರಿ ಟಿ.ವಿ.ಪ್ರಕಾಶ್ ಅವರಿಗೆ ಹೃದಯಸ್ಪರ್ಶಿ ಸನ್ಮಾನ ತಾಲ್ಲೂಕು ಆಡಳಿತದಿಂದ ನಡೆಯಿತು. ಹರಪನಹಳ್ಳಿ ತಾಲೂಕಿನ ಕ್ರೀಡಾಂಗಣದಲ್ಲಿ ನಡೆದ 75 ಗಣರಾಜ್ಯೋತ್ಸವದಲ್ಲಿ ಶಾಲಾ ಮಕ್ಕಳು ದೇಶ ಭಕ್ತಿ ಗೀತೆಗೆ ಸಾಮೂಹಿಕ ನೃತ್ಯ ಪ್ರದರ್ಶಿಸಿದರು
ತಹಶೀಲ್ದಾರ ಬಿ.ವಿ.ಗಿರೀಶ್ ಬಾಬು, ಮುಖ್ಯಾಧಿಕಾರಿ ಎರಗುಡಿ ಶಿವಕುಮಾರ, ಡಿವೈಎಸ್ಪಿ ವೆಂಕಟಪ್ಪ ನಾಯಕ, ಇಒ ಕೆ.ಆರ್.ಪ್ರಕಾಶ್, ಸಿಪಿಐ ನಾಗರಾಜ್ ಎಂ.ಕಮ್ಮಾರ, ವಲಯ ಅರಣ್ಯಾಧಿಕಾರಿ ಕೆ.ಮಲ್ಲಪ್ಪ, ಪುರಸಭೆ ಸದಸ್ಯರಾದ ಅಬ್ದುಲ್ ರೆಹಮಾನ್, ಲಾಟಿ ದಾದಾಪೀರ್. ಮಂಜುನಾಥ್ ಇಜಂತ್ಕರ್. ಉದ್ದಾರ ಗಣೇಶ್, ಜಾಕೀರ್ ಹುಸೇನ್, ಚಿಕ್ಕೇರಿ ಬಸಪ್ಪ, ಎಇಇ ಪ್ರಕಾಶ್ ಪಾಟಿಲ್, ರೇಣುಕಾದೇವಿ, ವಿಜಯಲಕ್ಷ್ಮಿ, ದೈಹಿಕ ಶಿಕ್ಷಣ ಪರಿವೀಕ್ಷಕ ಕೆ.ಷಣ್ಮುಖಪ್ಪ, ಹೊನ್ನತ್ತೆಪ್ಪ, ಗಿರಜ್ಜಿ

## ವಿಶ್ವದಲ್ಲಿಯೇ ಭಾರತ ಸಂವಿಧಾನ ಶ್ರೇಷ್ಠ ಸಂವಿಧಾನದ ಆಶಯ ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು



**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ:**
ನಮ್ಮ ಸಂವಿಧಾನಕ್ಕೆ ವಿಶ್ವದಲ್ಲಿಯೇ ಅಪಾರ ಗೌರವ ಮನ್ನಣೆಯನ್ನು ಹೊಂದಿದೆ ಎಂದು ಶಾಸಕ ಕೆ.ನೇಮಿರಾಜ್‌ನಾಯ್ಕ್ ಅಭಿಪ್ರಾಯ ಪಟ್ಟರು.
ಪಟ್ಟಣದ ಗಂಗಾವತಿ ಭೀಮಪ್ಪನವರ ಸರ್ಕಾರಿ ಪ.ಪೂ.ಕಾಲೇಜ್ ಆವರಣದ ಕ್ರೀಡಾಂಗಣದಲ್ಲಿ ತಾಲೂಕು ಆಡಳಿತದಿಂದ ಹಮ್ಮಿಕೊಳ್ಳಲಾಗಿದ್ದ ಗಣರಾಜ್ಯೋತ್ಸವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಡಾ.ಬಿ.ಆರ್.ಅಂಬೇಡ್ಕರ್‌ರವರ ಸಮಿತಿಯು ನಿರಂತರ ಅಧ್ಯಯನದ ಬಳಿಕ ಈ ಸಂವಿಧಾನ ಜಾರಿಗೊಂಡಿದ್ದು, ವಿವಿಧ ಸಂಸ್ಕೃತಿ ಹಾಗೂ ಧರ್ಮಗಳನ್ನೊಳಗೊಂಡ ದೇಶವಾಗಿದ್ದು ಸೌಹಾರ್ಧತೆಯ ಮತ್ತು ಮಮತೆಯ ದೇಶವಾಗಿದೆ ಎಂದರು. ದೇಶದ ಒಗ್ಗಟ್ಟನ್ನು ಒಡೆಯುವ ತಂತ್ರಗಾರಿಕೆ ಮೊದಲಿನಿಂದಲೂ ಬಂದಿದೆ. ದೇಶವನ್ನು ಕೊಳ್ಳೆ ಹೊಡೆಯುವಂತ ಸಂಸ್ಕಾರವನ್ನು ಹುಟ್ಟು ಹಾಕಿದವರು, ಅದನ್ನೇ ಸಂಪ್ರದಾಯ ಎನ್ನುವಂತೆ ಈಗಲೂ ಮುಂದುವರೆಸಲು ಕೆಲ ಕುಹುಕು ಮನಸ್ಸುಗಳು ಆತೊರೆಯುತ್ತಿವೆ. ಇದೆಲ್ಲವನ್ನು ಕಟ್ಟಿ ಹಾಕುವ ಮತ್ತು ದೇಶಕ್ಕೆ ಅಪಚಾರವೆಸಗುವವರು ಬಾಲಮುದುರಿಕೊಂಡು ಕೂಡುವಂತೆ ನಮ್ಮ ದೇಶದ ಹೆಮ್ಮೆಯ ಪ್ರಧಾನಿಗಳಾದ ನರೇಂದ್ರ ಮೋದಿಯವರು ಮಾಡಿದ್ದಾರೆ. ನಮ್ಮ ಭಾರತ ದೇಶ ಮುಂದೆ ಪ್ರಪಂಚದಲ್ಲಿಯೇ ಬಲಿಷ್ಠವಾದ ದೇಶವಾಗಲಿದೆ ಎಂದರು.
ಧ್ವಜಾರೋಹಣ ನೆರವೇರಿಸಿದ ತಹಸೀಲ್ದಾರ್ ಚಂದ್ರಶೇಖರ್ ಶಂಭಣ್ಣ ಗಾಳಿ ಮಾತನಾಡಿ, ಭಾರತ ದೇಶದಲ್ಲಿ ಪ್ರತಿಯೊಬ್ಬರಿಗೂ ಅಭಿವ್ಯಕ್ತ ಸ್ವಾತಂತ್ರ ಸಿಗಬೇಕು ಎನ್ನುವ ಉದ್ದೇಶದಿಂದ ಈ ಗಣರಾಜ್ಯೋತ್ಸವ ಜಾರಿಗೆ ತರಲಾಯಿತು. ಇಲ್ಲಿಯ ಸಂವಿಧಾನದ ಆಶಯ ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ಎನ್ನುವ ವಾಕ್ಯವೇ ಶಪಥವಾಗಿ ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರಕ್ಕೆ ಸಮರ್ಪಣೆಯಾಯಿತು.
ವೇದಿಕೆಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದವರನ್ನು ತಾಲೂಕು ಆಡಳಿತದಿಂದ ಸನ್ಮಾನಿಸಲಾಯಿತು. ಈ ವೇಳೆ ಪುರಸಭೆ ಸದಸ್ಯರಾದ ದೀಪಕ್ ಕಠಾರೆ, ಭೋವಿ ವೀರಣ್ಣ, ನಾಗರಾಜ್ ಜನ್ನು, ಎ.ಮಂಗಳ ರವೀಂದ್ರಗೌಡ, ಚನ್ನಮ್ಮ ಎಚ್.ಎಂ.ವಿಜಯಕುಮಾರ್, ಕಮಲಮ್ಮ, ಬಣಕಾರ್ ಸುರೇಶ್, ಜೆಡಿಎಸ್ ತಾಲೂಕು ಅಧ್ಯಕ್ಷ ವೈ.ಮಲ್ಲಿಕಾರ್ಜುನ, ಮುಖಂಡರಾದ ಕೃಷ್ಣಮೂರ್ತಿ ಶೆಟ್ರು, ಕಿನ್ನಾಳ್ ಸುಭಾಷ್, ಚಿತ್ತವಾಡ್ಗಿ ಪ್ರಕಾಶ, ಪಾಂಡುನಾಯ್ಕ್, ಹೋಟಲ್ ಸಿದ್ದರಾಜು, ಬಿ.ಜಿ.ಬಡಿಗೇರ್, ಬಡಿಗೇರ್ ಸವರಾಜ, ಸರ್ದಾರ್ ಯಮನೂರ್, ಪುರಸಭೆ ಮುಖ್ಯಾಧಿಕಾರಿ ಪ್ರಭಾಕರ, ಬಿಇಒ ಮೈಲೇಶ್ ಬೇವೂರ್, ಸಿಪಿಐ ವಿಕಾಸ್ ಲಮಾಣಿ ಮತ್ತಿತರರು ಇದ್ದರು. ತಾ.ಪಂ.ಇಒ ಪರಮೇಶ್ವರಪ್ಪ, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ಅಧಿಕಾರಿ ಆಂಜನೇಯ ಉಲ್ಲಾಳ್, ಶಿವಶಂಕರ್ ಸ್ವಾಮಿ ನಿರ್ವಹಿಸಿದರು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA